# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಜನವರಿ 31, 2022

ಸಂಪುಟ : 48 ಸಂಚಿಕೆ : 261 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಪೆಗಾಸಸ್: ಸಚಿವ ವೈಷ್ಣವ್ ವಿರುದ್ಧ ಹಕ್ಕುಚ್ಯುತಿ ಅರ್ಜಿ

**ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಒತ್ತಾಯ**

ನವದೆಹಲಿ, ಜ. 30 – ಪೆಗಾಸಸ್ ವಿಷಯಕ್ಕೆ ಸಂಬಂಧಿಸಿದಂತೆ ಲೋಕಸಭೆಗೆ ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ವಿರುದ್ಧ ಹಕ್ಕುಚ್ಯುತಿ ಕ್ರಮ ತೆಗೆದುಕೊಳ್ಳಬೇಕಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರು ಒತ್ತಾಯಿಸಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲ ಅವರಿಗೆ ಪತ್ರ ಬರೆದಿರುವ ಚೌಧರಿ, ಪೆಗಾಸಸ್‌ಗೂ ತನಗೂ ಸಂಬಂಧ ಇಲ್ಲ ಎಂದು ಕೇಂದ್ರ ಸರ್ಕಾರ ಸದನದಲ್ಲಿ ತಿಳಿಸಿತ್ತು. ಎನ್.ಎಸ್.ಓ.ದಿಂದ ಕಣ್ಗಾವಲು ತಂತ್ರಾಂಶ ಪಡೆದಿಲ್ಲ ಎಂದು ತಿಳಿಸಿತ್ತು. ಆದರೆ, ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಬಂದಿರುವ ಇತ್ತೀಚಿನ ವರದಿಯಿಂದ ಮೋದಿ ಸರ್ಕಾರ ಸಂಸತ್ತಿನ ದಾರಿ ತಪ್ಪಿಸಿರುವುದು ಹಾಗೂ ದೇಶದ ಜನರಿಗೆ ಸುಳ್ಳ ಹೇಳಿರುವುದು ಕಂಡು ಬರುತ್ತಿದೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಸಚಿವರ ವಿರುದ್ಧ ಹಕ್ಕುಚ್ಯುತಿಗೆ ಕ್ರಮ ತೆಗೆದುಕೊಳ್ಳಬೇಕು. ಅವರು ಪೆಗಾಸಸ್ ವಿಷಯದಲ್ಲಿ (2ನೇ ಪುಟಕ್ಕೆ)

## ನಾಳೆ ನಿರ್ಮಲಾ ಬಜೆಟ್

### ಆರ್ಥಿಕ ಚೇತರಿಕೆ ಕ್ರಮಗಳ ನಿರೀಕ್ಷೆ

ನವದೆಹಲಿ,ಜ. 30 – ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾಳೆ ಮಂಗಳವಾರ ಫೆ.1ರಂದು ತಮ್ಮ ನಾಲ್ಕನೇ ಬಜೆಟ್ ಮಂಡಿಸಲಿದ್ದು, ಸರ್ಕಾರ ಜನಪ್ರಿಯ ಯೋಜನೆಗಳು ಹಾಗೂ ಹಣಕಾಸು ಜವಾಬ್ದಾರಿಗಳನ್ನು ಯಾವ ರೀತಿ ಸಮತೋಲನ



ಮಾಡಲಿದೆ ಎಂಬುದರ ಮೇಲೆ ಹೆಚ್ಚಿನ ಗಮನ ಇರಲಿದೆ.

ಕಾರ್ಪೊರೇಟ್ ವಲಯ ಬೆಳವಣಿಗೆ ಮುಂದುವರೆಸಲು ಕೆಲ ಪ್ರಮುಖ ಘೋಷಣೆಗಳ ನಿರೀಕ್ಷೆ ಹೊಂದಿದೆ. ವೈಯಕ್ತಿಕ ತೆರಿಗೆ ಪಾವತಿದಾರರು ಕೆಲ ವಿನಾಯಿತಿಗಳ ನಿರೀಕ್ಷೆಯಲ್ಲಿದ್ದಾರೆ.

2025ರಲ್ಲಿ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕ ವ್ಯವಸ್ಥೆಯಾಗುವ ಕನಸು ಹೊಂದಿದೆ. 2022-23ರ ಬಜೆಟ್ ಈ ದಿಸೆಯಲ್ಲಿ ಪ್ರಮುಖ ಹೆಜ್ಜೆಯಾಗಬೇಕಿದೆ.

ಎಲೆಕ್ಟ್ರಿಕ್ ವಾಹನಗಳ ವಲಯ, ನವೀಕರಿಸುವ ಇಂಧನ ಹಾಗೂ ಸಂಬಂಧಿಸಿದ ಬಿಡಿ ಭಾಗಗಳ ವಲಯಗಳು ಸೀಮಾ ಸುಂಕದಲ್ಲಿ ಸುಧಾರಣೆಯ ನಿರೀಕ್ಷೆ ಹೊಂದಿವೆ. ಸೆಮಿಕಂಡಕ್ಟರ್ (2ನೇ ಪುಟಕ್ಕೆ)

# ಭ್ರಷ್ಟಾಚಾರ ದೇಶವನ್ನು ಗೆದ್ದಲಿನಂತೆ ಹಾಳು ಮಾಡುತ್ತದೆ : ಮೋದಿ

ನವದೆಹಲಿ, ಜ. 30 – ಭ್ರಷ್ಟಾಚಾರ ದೇಶವನ್ನು ಗೆದ್ದಲಿನಂತೆ ಹಾಳು ಮಾಡುತ್ತದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಭ್ರಷ್ಟಾಚಾರ ತೊಲಗಿಸಲು ಜೊತೆಯಾಗಿ ಕಾರ್ಯ ನಿರ್ವಹಿಸಬೇಕಿದೆ ಎಂದಿದ್ದಾರೆ.

ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಪ್ರಧಾನಿ ಮೋದಿ, ಒಂದು ಕೋಟಿಗೂ ಹೆಚ್ಚು ಮಕ್ಕಳು ಅಂಚೆ ಪತ್ರಗಳ ಮೂಲಕ ಭವಿಷ್ಯ ಭಾರತದ ಕಲ್ಪನೆಗಳನ್ನು ತಿಳಿಸಿದ್ದಾರೆ ಎಂದು ಹೇಳಿದರು. ಸ್ವಾತಂತ್ರ್ಯದ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಭಾರತ ಯಾವ ರೀತಿ ಇರಬೇಕು ಎಂಬ ಬಗ್ಗೆ ಮಕ್ಕಳು ಅಂಚೆ ಪತ್ರ ಬರೆಯುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಪತ್ರಗಳಲ್ಲಿ



ಹೊಸ ಪೀಳಿಗೆ ದೇಶದ ಭವಿಷ್ಯದ ಕುರಿತು ಹೊಂದಿರುವ ಚಿತ್ರಣವನ್ನು ತೋರಿಸುತ್ತದೆ. ಅಸ್ಸಾಂನ ಬಾಲಕಿಯೊಬ್ಬರು 100ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಭಾರತ ವಿಶ್ವದಲ್ಲೇ ಸ್ವಚ್ಛ ದೇಶವಾಗಬೇಕು ಎಂದು ಬಯಸಿದ್ದಾರೆ. ಉಗ್ರವಾದದಿಂದ ಮುಕ್ತವಾಗಬೇಕು, (2ನೇ ಪುಟಕ್ಕೆ)

### ಮೂರನೇ ಅಲೆ ವಿರುದ್ಧ ಯಶಸ್ಸಿನ ಹೋರಾಟ

ನವದೆಹಲಿ, ಜ. 30 – ಭಾರತದ ಕೊರೊನಾದ ಮೂರನೇ ಅಲೆಯ ವಿರುದ್ಧ ಯಶಸ್ಸಿನ ಹೋರಾಟ ನಡೆಸುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಕೊರೊನಾದ ಹೊಸ ಪ್ರಕರಣಗಳು ಕಂಡು ಬರುವುದು ಕಡಿಮೆಯಾಗುತ್ತಿದೆ. ಇದು ಸಕಾರಾತ್ಮಕ ಸೂಚನೆಯಾಗಿದೆ (2ನೇ ಪುಟಕ್ಕೆ)

## ಈಡಿಗರ ಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ ಪೀಠಾರೋಹಣ ಇಂದು



ದಾವಣಗೆರೆ, ಜ.30- ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಗ್ರಾಮ ದಲ್ಲಿರುವ ಆರ್ಯ - ಈಡಿಗ ಮಹಾಸಂಸ್ಥಾನದ ನೂತನ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಮಹಾಸ್ವಾಮೀಜಿಯವರ ಪೀಠಾರೋಹಣ ಕಾರ್ಯಕ್ರಮವು ನಾಳೆ ದಿನಾಂಕ 31ರ ಸೋಮವಾರದಿಂದ ಫೆಬ್ರವರಿ 2ರ ಬುಧವಾರದವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಪೀಠಾರೋಹಣದ ಅಂಗವಾಗಿ ನಾಳೆ ದಿನಾಂಕ 31ರ ಸೋಮವಾರ ಸಂಜೆ ಗೋ ಪೂಜೆ, ವಾಸ್ತು ಹೋಮ, ಸುದರ್ಶನ ಹೋಮ, ದೇವಿ ಪೂಜೆ, ಅನ್ನ ಪ್ರಸಾದ ಜರುಗಲಿದೆ.

ಫೆಬ್ರವರಿ 1ರ ಮಂಗಳವಾರ ಪ್ರಾತಃಕಾಲ ಗಣಪತಿ ಹೋಮ, ಮಹಾಮೃತ್ಯುಂಜಯ ಯಾಗ, ಸಂಜೆ ಭಗವತಿ ಸೇವೆ, ಕಳಸ ಪೂಜೆ, ಪವಮಾನ ಸೂಕ್ತ ಪಠಣ, ದುರ್ಗಾ ಹೋಮ ಆಯೋಜನೆಗೊಂಡಿದೆ.

ಫೆಬ್ರವರಿ 2ರ ಬುಧವಾರ ಪ್ರಾತಃಕಾಲ ಗುರು ಪೂಜೆ, ಸಹಸ್ರ ನಾಮಾರ್ಚನೆ, ಯತಿಗಳಿಗೆ ಕಳಸಾಭಿಷೇಕ, ಪೀಠಾರೋಹಣ ನಡೆಯಲಿದೆ ಎಂದು (4ನೇ ಪುಟಕ್ಕೆ)

## ಜಿಲ್ಲೆಯಲ್ಲಿ 239 ಪಾಸಿಟಿವ್

ದಾವಣಗೆರೆ, ಜ.30- ಜಿಲ್ಲೆಯಲ್ಲಿ 239 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 479 ಜನರು ಗುಣಮುಖರಾಗಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 101, ಹರಿಹರ 23, ಜಗಳೂರು 28, ಚನ್ನಗಿರಿ 26, ಹೊನ್ನಾಳಿ 55 ಹಾಗೂ ಹೊರ ಜಿಲ್ಲೆಯ 6 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ 1660 ಸಕ್ರಿಯ ಪ್ರಕರಣಗಳಿವೆ.

## ವಿಜಯಪುರ ಜಿಲ್ಲೆಯಲ್ಲಿ ಲಘು ಭೂಕಂಪ

ಬೆಂಗಳೂರು, ಜ. 30 – ವಿಜಯಪುರ ಜಿಲ್ಲೆಯಲ್ಲಿ ಭಾನುವಾರ ರಿಕ್ಟರ್ ಮಾಪಕದಲ್ಲಿ 2.9ರಷ್ಟಿದ್ದ ಲಘು ಭೂಕಂಪ ಸಂಭವಿಸಿದೆ.

ಬೆಳಿಗ್ಗೆ 9.15ರ ಮಯದಲ್ಲಿ ವಿಜಯಪುರ ತಾಲ್ಲೂಕಿನ ಅಂಗನಾಳ್ ಹಳ್ಳಿಗೆ 1.2 ಕಿ.ಮೀ. ದೂರದಲ್ಲಿ ಭೂಕಂಪ ಕೇಂದ್ರೀಕೃತವಾಗಿತ್ತು ಎಂದು ವಿಕೋಪ ನಿಗಾ ಕೇಂದ್ರ ತಿಳಿಸಿದೆ. ಇದರಿಂದ ಯಾವುದೇ ಹಾನಿಯಾಗಿಲ್ಲ.

## ಬದುಕಿನುದ್ದಕ್ಕೂ ಸಮಾಜದ ಒಳಿತು ಬಯಸಿದ ಸಿದ್ಧಲಿಂಗ ಶ್ರೀಗಳು

### ಉಜ್ಜಯಿನಿ ಸಿದ್ಧಲಿಂಗ ಶ್ರೀ ಪುಣ್ಯಾರಾಧನೆಯಲ್ಲಿ ರಂಭಾಪುರಿ ಶ್ರೀ

ರಾಣೇಬೆನ್ನೂರು, ಜ.30- ಬದುಕಿನುದ್ದಕ್ಕೂ ಸಮಾಜದ ಒಳಿತನ್ನೇ ಬಯಸಿದವರು, ಸರಳ ಬದುಕು ನಡೆಸಿದ ಕೀರ್ತಿ ಉಜ್ಜಯಿನಿ ಲಿಂ. ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಗೆ ಸಲ್ಲುತ್ತದೆ ಎಂದು ರಂಭಾಪುರಿ ಜಗದ್ಗುರು ಡಾ. ವೀರ ಸೋಮೇಶ್ವರ ರಾಜದೇಶಿಕೇಂದ್ರ ಭಗವತ್ಪಾದರು ನುಡಿದರು.



ಅವರು ಇಲ್ಲಿನ ಶನೇಶ್ವರ ಮಠದಲ್ಲಿ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗಸ್ವಾಮಿಗಳ 85 ನೇ ಪುಣ್ಯಸ್ಮರಣೋತ್ಸವದಲ್ಲಿ ಆಶೀರ್ವಚನ ನೀಡುದರು.

ಕೇವಲ ಸ್ವಾಮೀಜಿಯಾಗಿ ಮಠದಲ್ಲಿ ಕುಳಿತುಕೊಳ್ಳದೇ, ಧಾರ್ಮಿಕ ವಿಧಿವಿಧಾನಗಳಿಗೆ ಸೀಮಿತಗೊಳ್ಳದೇ ಸಮಾಜದ ಒಳಿತಿಗಾಗಿ ಬದುಕನ್ನು ಸವೆಸಿದವರು ಎಂದು ಸಿದ್ಧಲಿಂಗ ಶ್ರೀಗಳ ಸಮಾಜ ಸೇವೆಯನ್ನು ಸ್ಮರಿಸಿದರು.

ದಿಕ್ಕು ತಪ್ಪಿದ ಸಮಾಜವನ್ನ ಸರಿದಾರಿಗೆ ತರಲು ಕೆಲವು ಮಠಗಳು, ಕೆಲವು ಮಠಾಧೀಶರು ಪ್ರಯತ್ನ ಮಾಡುತ್ತಾರೆ. ಆ ಮಠಗಳಲ್ಲಿ ರಾಣೇಬೆನ್ನೂರು ಶನೇಶ್ವರ ಮಠವು ಒಂದು ಎಂದು ಹೇಳಿದರು.

ಇಂದಿನ ಕಾಲಮಾನದಲ್ಲೂ ಸಹ ನಾಡಿನ ಭಕ್ತರು ಮಠ ಹಾಗೂ ಮಠಾದೀಶರ ಮೇಲೆ ಅಪಾರ ನಂಬಿಕೆ ಹಾಗೂ ಭರವಸೆ ಇಟ್ಟುಕೊಂಡಿದ್ದಾರೆ. ಅದನ್ನ ಉಳಿಸಿಕೊಳ್ಳುವಲ್ಲಿ ಪಂಚಪೀಠಗಳು, ಶಾಖಾ ಮಠಗಳು ನಾಡಿನೆಲ್ಲೆಡೆ ಇಂಥಹ ಸಮಾಜಮುಖಿ ಕಾರ್ಯಕ್ರಮ ಗಳನ್ನ ಹಾಕಿಕೊಳ್ಳುತ್ತಿವೆ. ಈಗಿನ ಸಂತತಿ ಸಹ ಹಿರಿಯರಂತೆ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಸಿದ್ದಲಿಂಗ ಶ್ರೀಗಳ ಪುಣ್ಯಾರಾಧನೆ ಅಂಗವಾಗಿ 64 ಜಂಗಮ ದಂಪತಿಗಳಿಗೆ ಗೌರವ ಸಮರ್ಪಣೆ, ಜಗದ್ಗುರುಗಳ ಇಷ್ಟಲಿಂಗ ಪೂಜೆ, ಮುಂತಾದ (2ನೇ ಪುಟಕ್ಕೆ)

### ಪಂಚಪೀಠ ಒಕ್ಕೂಟದ ಸುಳಿವು

ಒಂದೂವರೆ ದಶಕದಿಂದ ಸ್ಥಗಿತಗೊಂಡಿದ್ದ ಪಂಚಪೀಠದ ಒಕ್ಕೂಟ ವ್ಯವಸ್ಥೆಯನ್ನು ಮತ್ತೆ ಬಲಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಡಾ.ರಂಭಾಪುರಿ ಜಗದ್ಗುರುಗಳು ಸುಳಿವು ನೀಡಿದರು.

ಜಗದ್ಗುರುಗಳು ಸಿದ್ದಲಿಂಗ ಶ್ರೀಗಳ ಪುಣ್ಯಾರಾಧನೆ ಸಮಾರಂಭದ ನಂತರ ಪತ್ರಿಕೆಯವರ ಜೊತೆ ಮಾತನಾಡಿದರು.

ಈ ಕುರಿತು ಕೇದಾರ ಹಾಗೂ ಕಾಶೀ ಜಗದ್ಗುರುಗಳ ಜೊತೆ ದೂರವಾಣಿಯಲ್ಲಿ ಸಂಪರ್ಕ ನಡೆಸಿದ್ದು, ಫೆಬ್ರುವರಿ 8 ರಂದು ಮಹಾರಾಷ್ಟ್ರದ ನಾಂದೇಡನ ದಶಮುಖ ಆಶ್ರಮದಲ್ಲಿ ಮೂವರು ಜಗದ್ಗುರುಗಳು ಚರ್ಚಿಸಲಿದ್ದೇವೆ. ಕೆಲವೊಂದು ಧಾರ್ಮಿಕ ವಿಧಿ-ವಿಧಾನಗಳಲ್ಲಿರುವ ಭಿನ್ನಾಭಿಪ್ರಾಯವನ್ನ ಚರ್ಚಿಸಿ ಅದಕ್ಕಾಗಿ ಶಾಶ್ವತ ಪರಿಹಾರ ಕಂಡುಕೊಳ್ಳಲಿದ್ದೇವೆ. ನಂತರದಲ್ಲಿ ಉಜ್ಜಯಿನಿ ಹಾಗೂ ಶ್ರೀ ಶೈಲ ಜಗದ್ಗುರುಗಳ ಜೊತೆ ಸೇರಿ ಪರಂಪರೆಗಳ ಸಮಸ್ಯೆಗಳನ್ನ ಪರಿಹರಿಸಿಕೊಂಡು ಎಲ್ಲರೂ ಒಂದೇ ವೇದಿಕೆಯಲ್ಲಿ ಸೇರುವ ಪ್ರಾಮಾಣಿಕ ಪ್ರಯತ್ನ ಇದಾಗಿದೆ. ಮುಂದೆ ಒಕ್ಕೂಟ ವ್ಯವಸ್ಥೆಯಲ್ಲಿಯೇ ಮುಂದುವರಿಯುವದಾಗಿ ರಂಭಾಪುರಿ ಜಗದ್ಗುರುಗಳು ವಿವರಿಸಿದರು.

### ಪಂಚಪೀಠಗಳ ತವರೂರು ರಾಣೇಬೆನ್ನೂರು

**ಹಿಂದೆ, ಈಗಲೂ ಹಾಗೂ ಮುಂದೆಯೂ ಪಂಚಪೀಠಗಳ ತವರೂರು ರಾಣೆಬೆನ್ನೂರು. ಇಲ್ಲಿ ಅಪಾರ ಸಂಖ್ಯೆಯ ದಾನಿಗಳಿದ್ದಾರೆ. ಅವರ ಶ್ರದ್ಧಾ- ಭಕ್ತಿಗೆ ನಾವು ಮನದುಂಬಿ ಹರಸುತ್ತೇವೆ.**

**ನಾಡಿನ, ಕ್ಷೇತ್ರದ ಜನರ ಕಲ್ಯಾಣಕ್ಕಾಗಿ ಶನೇಶ್ಚರ ಮಠದಲ್ಲಿ ಪ್ರತಿವರ್ಷ ನಡೆಯುವ ಸಿದ್ದಲಿಂಗ ಶ್ರೀ ಗಳ ಪುಣ್ಯಾರಾಧನೆಗೆ ಆಗಮಿಸುವದು. ನಂತರದಲ್ಲಿ ಈ ವರ್ಷ ಮೊದಲು ಶಾಸಕರ ಮನೆಯಲ್ಲಿ. ನಂತರ ನಗರದಲ್ಲಿ ಮೂರು ದಿನಗಳ ಕಾಲ ಇಷ್ಟಲಿಂಗ ಪೂಜಾ ಕಾರ್ಯಕ್ರಮ ಶಾಸಕರೇ ಕೊಟ್ಟ ದಿನಾಂಕದಂದು ನಡೆಸುವದಾಗಿ ರಂಭಾಪುರಿ ಜಗದ್ಗುರುಗಳು ತಿಳಿಸಿದರು.**

## ಜಗಳೂರು ವಿದ್ಯಾರ್ಥಿ ನಿಲಯಕ್ಕೆ ಅಧಿಕಾರಿಗಳ ಅನಿರೀಕ್ಷಿತ ಭೇಟಿ



ಜಗಳೂರು, ಜ.30- ತಾಲ್ಲೂಕಿನ ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಸ್.ಟಿ. ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮತ್ತು ಜಿಲ್ಲಾ ಉಪನಿರ್ದೇಶಕರ ಕಚೇರಿ ಅಧೀಕ್ಷಕಿ ಗೀತಾ, ತನಿಖಾಧಿಕಾರಿ ನಾಗರತ್ನ ಅವರು ಭೇಟಿ ನೀಡಿ, ಮಕ್ಕಳ ಯೋಗ ಕ್ಷೇಮ ಮತ್ತು ಅವರ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿದರು.

**ವಿದ್ಯಾರ್ಥಿನಿಯರ ಯೋಗಕ್ಷೇಮ, ಕಾರ್ಯಚಟುವಟಿಕೆ ಪರಿಶೀಲನೆ**

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮಾತನಾಡಿ, ರಾಜ್ಯದಲ್ಲಿ ಕೋವಿಡ್-19 ಪಟ್ಟಣದಲ್ಲಿ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ (2ನೇ ಪುಟಕ್ಕೆ)

## ಪಕ್ಷದ ಹಿತದೃಷ್ಟಿಯಿಂದ 15 ಸಚಿವರ ವಿರುದ್ಧ ಸಿಎಂಗೆ ದೂರು ನೀಡಿದ್ದೇನೆ

### ಸರ್ಕಾರ-ಪಕ್ಷದ ವಿರುದ್ಧ ಹೇಳಿಕೆ ನೀಡಿಲ್ಲ, ಲಿಖಿತ ದೂರು ನೀಡಿಲ್ಲ

ಹೊನ್ನಾಳಿ, ಜ.30- ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಬಳಿ 15 ಕ್ಕೂ ಹೆಚ್ಚು ಸಚಿವರು ದುರಹಂಕಾರಿ ಮನೋಭಾವದಿಂದ ವರ್ತಿಸುತ್ತಿದ್ದಾರೆ ಎಂಬ ವಿಷಯದ ಬಗ್ಗೆ ಲಿಖಿತವಾದ ದೂರು ನೀಡಿಲ್ಲ. ಮೌಖಿಕವಾಗಿ ಹೆಸರಿಸಿ ವಿವರಿಸಿ ದ್ದೇನೆ ಎಂದು ಸಿ.ಎಂ.ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.



ಹೊನ್ನಾಳಿಯಲ್ಲಿಂದು ಮಾಧ್ಯಮದವರೊಂದಿಗೆ ಮಾತ ನಾಡಿದ ಅವರು, ಯಡಿಯೂರಪ್ಪನವರ ಅವಧಿಯಲ್ಲೂ ಇದೇ ರೀತಿ ಸಚಿವರ ವರ್ತನೆ ಬಗ್ಗೆ ವಿವರಿಸಿದ್ದೆ. ಬಸವರಾಜ ಬೊಮ್ಮಾಯಿ ಅವರ ಬಳಿಯೂ ಈ ವಿಷಯವಾಗಿ ಚರ್ಚಿಸಿದ್ದೇನೆ ಎಂದರು.

2023 ರ ಚುನಾವಣೆಯಲ್ಲಿ ಬಿಜೆಪಿ ಅಸ್ತಿತ್ವದ ಪ್ರಶ್ನೆ ಮುಂದಿಟ್ಟು (2ನೇ ಪುಟಕ್ಕೆ)


**ಕೋಗಳಿ ಗ್ರಾಮದ ನಿವೃತ್ತ ಶಿಕ್ಷಕ**

**ಕೆ.ಎನ್. ಮಂಜುನಾಥ ಗೌಡ್ರು ನಿಧನ**



ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕೋಗಳಿ ಗ್ರಾಮದವರಾದ ದಾವಣಗೆರೆ ಎಸ್.ಎಸ್.ಬಡಾವಣೆ 'ಎ' ಬ್ಲಾಕ್, 4ನೇ ಮುಖ್ಯ ರಸ್ತೆ ನಿವಾಸಿ

**ಶ್ರೀ ಕೆ.ಎನ್. ಮಂಜುನಾಥ ಗೌಡ್ರು** ಅವರು

ಅನಾರೋಗ್ಯದಿಂದ ದಿನಾಂಕ 30.01.2022ರ ಭಾನುವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 84 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ದಿವಂಗತರ ಅಂತ್ಯಕ್ರಿಯೆಯನ್ನು ದಿನಾಂಕ 31.01.2022ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಪರಶುರಾಮನಗೌಡ್ರು (ರಾಮು), ರಾಕೇಶ್ ಪಿ.ಎಂ.

ಆಶ್ರಯ ಮೆಡಿಕಲ್ಸ್, ದಾವಣಗೆರೆ.

ಕೋಗಳಿ ನೀಲಕಂಠನ ಗೌಡ್ರು ವಂಶಸ್ಥರು ಮತ್ತು ಬಂಧು-ಮಿತ್ರರು.

ಮೊ. 9886255369, 9663410999


## ಕುಂದವಾಡ ಕೆರೆ ವಾಯು ವಿಹಾರಿಗಳ ಮುಂಜಾನೆ ನಡಿಗೆ




ದಾವಣಗೆರೆ, ಜ.30- ಕುಂದವಾಡ ಕೆರೆ ವಾಯು ವಿಹಾರಿಗಳ ಬಳಗದ ನೇತೃತ್ವದಲ್ಲಿ ಇಂದು ಮುಂಜಾನೆ ಬಳಗದವರು ಸೇರಿದಂತೆ ಮಹಿಳೆಯರು, ಮಕ್ಕಳಾದಿಯಾಗಿ ದಾವಣಗೆರೆಯಿಂದ ಹರಿಹರದವರೆಗೆ ಮಾತಿನೊಂದಿಗೆ ನಡಿಗೆ ನಡೆಸಲಾಯಿತು.

ಬಳಗದ ಸದಸ್ಯರು ಕಳೆದ 20 ವರ್ಷಗಳಿಂದ ಮಾತಿನೊಂದಿಗೆ ನಡಿಗೆ ನಡೆಸುತ್ತಿದ್ದು, ಈ ವರ್ಷವೂ ಸಹ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಹರಿಹರದ ಹರಿಹರೇಶ್ವರ ದೇವಾಲಯದವರೆಗೆ ನಡಿಗೆ ಮಾಡಿದರು. ಬೆಳಗಿನ ಜಾವ 5 ಕ್ಕೆ ಆರಂಭಗೊಂಡ ಕಾಲ್ನಡಿಗೆ ಬೆಳಿಗ್ಗೆ 7.30 ರ ಸುಮಾರಿಗೆ ಹರಿಹರ ತಲುಪಿತು.

ಸುಮಾರು 250ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಅದರಲ್ಲಿ ಮಹಿಳೆಯರು, ಮಕ್ಕಳು ಇದ್ದದ್ದು ವಿಶೇಷವಾಗಿತ್ತು. ನಂತರ ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿ ಸರಳ ಕಾರ್ಯಕ್ರಮ ನಡೆಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ದಂಪತಿ ಭಾಗವಹಿಸಿದ್ದರು.

ನಂತರ ಎಸ್ಪಿ ಸಿ.ಬಿ. ರಿಷ್ಯಂತ್ ಮಾತನಾಡಿ, ಪ್ರಸ್ತುತ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ. ಮುಂಜಾನೆಯ ನಡಿಗೆಯಿಂದ ಆರೋಗ್ಯಪೂರ್ಣ ಜೀವನ ಎಂಬುದನ್ನು ಅರಿಯಬೇಕಿದೆ. ಮುಂದಿನ ದಿನಗಳಲ್ಲೂ ಇಂತಹ ಆರೋಗ್ಯಕರ ಹವ್ಯಾಸವನ್ನು ಮುಂದುವರಿಸಿಕೊಂಡು ಹೋಗುವಂತೆ ಸಲಹೆ ನೀಡಿದರು.

ನಗರ ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳ್, ಕಾಲ್ನಡಿಗೆ ಜಾಥಾದ ಆಯೋಜಕರಾದ ಜೆ. ಈಶ್ವರ್‌ಸಿಂಗ್ ಕವಿತಾಳ್, ಶ್ರೀನಿವಾಸ ದಾಸಕರಿಯಪ್ಪ, ವಕೀಲ ರಾಜಾರಾವ್, ಡಾ. ಪ್ರವೀಣ್ ಅಂಬರ್‌ಕರ್, ಪಿ.ಸಿ. ರಾಮನಾಥ್, ಬಿ.ಎಂ. ಶಿವಕುಮಾರ್, ಗುರುನಾಥ್, ಅನಿಲ್ ಬಾರೆಂಗಳ್, ಮಧುಕೇಶವ, ಸೋಮಶೇಖರ ಬಾಬು, ರಾಜೀವ, ಶ್ರೀಧರ, ಉತ್ಸವ್, ಮುರುಳೀಧರ್ ಮತ್ತು ಇತರರು ಭಾಗವಹಿಸಿದ್ದರು.

## ಕೆನಡಾದಲ್ಲಿ ಲಸಿಕೆ ಕಡ್ಡಾಯದ ವಿರುದ್ಧ ಪ್ರತಿಭಟನೆ

### ಗುಪ್ತ ಸ್ಥಳಕ್ಕೆ ತೆರಳಿದ ಪ್ರಧಾನಿ ಹಾಗೂ ಕುಟುಂಬ

ಒಟ್ಟಾವಾ, ಜ. 30 – ಕೊರೊನಾ ಲಸಿಕೆ ಕಡ್ಡಾಯಗೊಳಿಸಿರುವುದರಿಂದ ಆಕ್ರೋಶಗೊಂಡಿರುವ ಕೆನಡಾದ ವಾಹನ ಚಾಲಕರು ಹಾಗೂ ಜನ ಸಾಮಾನ್ಯರು ರಾಜಧಾನಿ ಒಟ್ಟಾವಾದಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

'ಸ್ವಾತಂತ್ರ್ಯದ ಬೆಂಗಾವಲು' ಎಂದು ಘೋಷಿಸಿಕೊಂಡಿರುವ ವಾಹನ ಚಾಲಕರು, ಅಲ್ಲಿನ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡ್ಯೂ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕೊರೊನಾ ನಿರ್ಬಂಧಗಳಷ್ಟೇ ಅಲ್ಲದೇ, ಇತರೆ ಹಲವು ವಿಷಯಗಳಿಂದಲೂ ಪ್ರತಿಭಟನೆ ತೀವ್ರವಾಗಿದೆ.

ನೂರಾರು ಟ್ರಕ್‌ಗಳನ್ನು ರಾಜಧಾನಿಗೆ ತಂದು ನಿರಂತರವಾಗಿ ಹಾರ್ನ್ ಬಾರಿಸಲಾಗುತ್ತಿದೆ. ಸಂಸತ್ತಿಗೆ ಸಮೀಪ ಕಡು ಚಳಿಯ ನಡುವೆಯೂ ಜನರು ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರಧಾನ ಮಂತ್ರಿ ನಿವಾಸದ ಸಮೀಪವೇ ಪ್ರತಿಭಟನೆ ನಡೆಸಲಾಗುತ್ತಿದೆ. ಪ್ರಧಾನಿ ಹಾಗೂ (4ನೇ ಪುಟಕ್ಕೆ)

# ಘನತ್ಯಾಜ್ಯವನ್ನು ವೈಜ್ಞಾನಿಕ ನಿರ್ವಹಣೆ ಮಾಡದಿದ್ದರೆ ಪರಿಸರಕ್ಕೆ ಹಾನಿ



## ಜಗಳೂರಿನ ನ್ಯಾಯಾಧೀಶರಾದ ಜಿ. ತಿಮ್ಮಯ್ಯ ಕಳಕಳಿ

ಜಗಳೂರು, ಜ.30- ಘನತ್ಯಾಜ್ಯವನ್ನು ವೈಜ್ಞಾನಿಕ ನಿರ್ವಹಣೆ ಮಾಡದಿದ್ದರೆ ಪರಿಸರಕ್ಕೆ ಹಾನಿಯಾಗಲಿದೆ. ಎಂದು ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿವಿಲ್ ನ್ಯಾಯಾಧೀಶರಾದ ಜಿ. ತಿಮ್ಮಯ್ಯ ಅವರು ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಸದ್ಭವನಾ ದಿನ ಮತ್ತು ಸ್ವಚ್ಛತಾ ದಿನಾಚರಣೆ ಪ್ರಯುಕ್ತ ಪಟ್ಟಣ ಪಂಚಾಯಿತಿ ಹಾಗೂ ಕಾನೂನು ಸೇವಾ ಸಮಿತಿಯ ಸಹಯೋಗದಲ್ಲಿ ಸ್ವಚ್ಛತಾ ಕಾರ್ಯಕ್ರಮ, ಹಾಗೂ ಕಸ ನಿರ್ವಹಣೆಯ ಜಾಗೃತಿ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಪಟ್ಟಣದ ನಾಗರೀಕರು ಬಳಸಿದ ಪ್ಲಾಸ್ಟಿಕ್ ಸೇರಿದಂತೆ ಅನೇಕ ತ್ಯಾಜ್ಯ ವಸ್ತುಗಳಿಂದ ಪರಿಸರದ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ನಾಗರೀಕರು ಸಹ ತಮ್ಮ ಸುತ್ತಮುತ್ತಲಿನ ಪರಿಸರ ಕಾಪಾಡಿಕೊಳ್ಳುವುದು ಹಾಗೂ ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಹಸಿ ಕಸ, ಒಣ ಕಸ ವಿಂಗಡಿಸಿ ಪಟ್ಟಣ ಪಂಚಾಯಿತಿ ವಾಹನಕ್ಕೆ ನೀಡುವಂತೆ ಕರೆ ನೀಡಿದರು.

ಸಾಧ್ಯವಾದಷ್ಟು ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡುವುದು ಹಾಗೂ ತ್ಯಾಜ್ಯ ವಸ್ತುಗಳನ್ನು ಮರು ಬಳಕೆ ಮಾಡುವ ಮೂಲಕ ವೈಜ್ಞಾನಿಕ ನಿರ್ವಹಣೆ ಮಾಡುವುದು. ಅವಶ್ಯಕತೆ ಇರುತ್ತದೆ.

ಘನ ತ್ಯಾಜ್ಯ ನಿರ್ವಹಣೆ ನಿಯಮಗಳು 2016 ಮತ್ತು ಹಸಿರು ನ್ಯಾಯ ಪೀಠ ಆದೇಶದಂತೆ ಕಸ ವಿಂಗಡಣೆ ಮಾಡುವುದು, ಉತ್ಪಾದಕರಿಗೆ ಕಡ್ಡಾಯವಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಕಸವನ್ನು ಹಾಕುವುದು ಮತ್ತು ನಿಷೇಧಿತ ಪ್ಲಾಸ್ಟಿಕ್ ಬಳಸುವುದು ಅಪರಾಧವಾಗಿದೆ ಎಂದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕರು ಕಿಫಾಯತ್ ಅಹಮದ್, ನ್ಯಾಯಾಲಯದ ಸಿಬ್ಬಂದಿ ವರ್ಗದವರು, ಪೌರ ಕಾರ್ಮಿಕರು ಹಾಜರಿದ್ದರು.

# ವರಕವಿ ಡಾ. ದ.ರಾ.ಬೇಂದ್ರೆಯವರಿಗೆ ಅಕ್ಷರ ನಮನ

ಹಸಿಯಿದ್ದಳು ಬಿಸಿಯಾದಳು
ಸಸಿಯಿದ್ದ ಹುಡುಗಿ
ಹುಸಿಯರಿಯದ ಹುಡುಗಿ
ಕಣ್ಣೀದಿರಲೆ ಬೆಳೆದಳು
ಹೊಸ ದೇಸಿಯ ಬೆಡಗಿ

ಸೊಸೆಯಿದ್ದಳು ಚಿಗುರಿಟ್ಟಳು
ಉಗುರ್ಗೆಂಪಿನ ಹುಡುಗಿ
ಉಸಿರ್ಗಂಪಿನ ಹುಡುಗಿ
ಆಡುತ ನೋಡುತ ಬಿಟ್ಟಳು
ಊರೆಲ್ಲವ ನಡುಗಿ

ಚಿಗುರಿದ್ದಳು ಚಿಗರಿಯ ಮರಿ
ಹೂಬಿಟ್ಟಳು ಹುಡುಗಿ
ಮೊಗ್ಗಿದ್ದ ಹುಡುಗಿ
ಕಣ್ಣುಣಿತಕೆ ನಗೆ ಭಣಿತಕ್ಕೆ
ಮನೆ ಹೋಯಿತು ನಡುಗಿ

ಹಾ ಹಾ ಎನ್ನುತ್ತಾ ಬೆಳೆದಳು
ಕೂಸೆನಿಸಿದ ಹುಡುಗಿ
ಮಧುವಾದಳು ಹುಡುಗಿ
ಒಗರಿಳಿದಿತು, ಹುಳಿಯಿಳಿದಿತು
ಬೆಡಗುಳಿದಿತು ಅಡಗಿ

ಆ ಪಾಕವೊ ಆ ಪಾಡೊ
ತಾಯಾದಳು ಹುಡುಗಿ
ಹಾಯಾದಳು ಹುಡುಗಿ
ಪಡೆದಷ್ಟು ಹಿಗ್ಗವಳಿಗೆ
ಮಮತೆಯ ಕಂಪಿಡುಗಿ

ಪಾಡಾದಳು ಹಣ್ಣಾದಳು
ಮಣ್ಣಾದಳು ಹುಡುಗಿ
ನೆನಪಾದಳು ಹುಡುಗಿ
ವ್ಯಥೆಯಾದಳು ಕಥೆಯಾದಳು
ಎದೆಯಲ್ಲಿಯೇ ಮಡಗಿ!

ಇಂದು ವರಕವಿ ಬೇಂದ್ರೆಯವರ ಜನ್ಮ ದಿನ. ಕನ್ನಡದ ಈ ಮಹಾನ್ ಚೇತನದ ಸಾಹಿತ್ಯದ ಕೆಲ ಸಾಲುಗಳ ನೆನಕೆಯಿಂದ ಅವರಿಗೆ ನುಡಿನಮನ ಸಲ್ಲಿಸುವ ಚಿಕ್ಕ ಪ್ರಯತ್ನ ನನ್ನದು. ಬೇಂದ್ರೆಯವರ ಕುರಿತು ಬರೆಯುವುದೆಂದರೆ ಅವರ ಹುಟ್ಟು, ಬಾಲ್ಯ, ವೃತ್ತಿ, ಜೀವನ, ಸಾಧನೆ ಇವಷ್ಟೇ ಅಲ್ಲ. ಅವರ ಕವನದ ಕೆಲವು ಸಾಲುಗಳನ್ನು ಓದಿ, ಗ್ರಹಿಸಿ ಒಂದೆರಡು ನುಡಿ ಬರೆದದ್ದೇ ಆದರೆ, ಅದೇ ನಿಜವಾದ ಸ್ಮರಣೆ ಎನ್ನುವುದು ಹಿರಿಯ ಹಿತೈಷಿಗಳೊಬ್ಬರ ಮನದ ಮಾತು. ನನ್ನದೂ ಕೂಡ. ಈ ನೆಲೆಗಟ್ಟಿನಲ್ಲಿ ನಾನು ವರಕವಿಯ 'ಕಥೆಯಾದಳು ಹುಡುಗಿ' ಈ ಕವಿತೆಯ ಭಾವವನ್ನು ನನ್ನದೇ ಗ್ರಹಿಕೆಯಲ್ಲಿ, ನಾನು ಅರ್ಥೈಸಿಕೊಂಡಂತೆ ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ಪುಟ್ಟ ಹುಡುಗಿ ವ್ಯಥೆಯಾಗಿ, ಕಥೆಯಾದ ಬಗೆಯನ್ನು ಕವಿವರ್ಯರು ತಮ್ಮ ಕಾವ್ಯದ ಕುಸುರಿಯ ಮೂಲಕ ಅತ್ಯಂತ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಹೆಣ್ಣು ಒಂದು ಫಲ ಕೊಡುವ ಮರದಂತೆ. ಪುಟ್ಟ ಸಸಿಯಂತಿದ್ದ ಹುಡುಗಿ ಕಾಲಕ್ರಮೇಣ ಹಸಿಯಾದಳು, ಬಿಸಿಯಾದಳು. ವಯೋಸಹಜ ಯೌವನಕ್ಕೆ ಬೆಳೆದು ನಿಂತಳು. ಮೊಗ್ಗಿನಂತಿದ್ದ ಹುಡುಗಿ ಈಗ ಹೂವಾಗಿ ಅರಳಿ ಪರಿಮಳ ಬೀರತೊಡಗಿದಳು.

ಇದೇ ವಧುವಾಗುವ ಕಾಲಘಟ್ಟ.ಗಿಡ ಮರವಾಗುವ ಹಂತ, ಹೂವು ಪರಾಗ ಸ್ಪರ್ಶಕ್ಕೆ ಪಕ್ವವಾಗುವ ಕಾಲ, ಕವಿಯ ಸೂಕ್ಷ್ಮತೆ ಇರುವುದು ಇಲ್ಲಿಯೇ. ಗೃಹಸ್ಥಾಶ್ರಮಕ್ಕೆ ಕಾಲಿಟ್ಟು ವಧುವಾಗಿ ಮಧುವಾದಳು. ಜವಾಬ್ದಾರಿ ಅನಿವಾರ್ಯ ಅದುವೆ ಪಾಡಾಗುವಿಕೆ.ನಿಧಾನ ಈ ಸಕಲ ಅನುಭವಗಳಿಂದ ಅವಳಲ್ಲಿ ಪಕ್ವತೆ ಹಣ್ಣಾಗುವಿಕೆ, ಮಾಗುವಿಕೆ, ಬರುವುದು. ಇದೊಂದು ಸಾರ್ವತ್ರಿಕ ಸತ್ಯ. ಕೊನೆಗೆ ಪಾಡಾದಳು ಹಣ್ಣಾದಳು ನಂತರ ಇನ್ನೇನು !!!



ಇಂದು ಬೇಂದ್ರೆ ಜನ್ಮ ದಿನ

ಜೀವ ಜೀವನ ಸವೆಸಿ ಮಣ್ಣಾದಳು. ಕೊನೆಗೆ ಇನ್ನು ಉಳಿದುದೇನು ಬರಿದೇ ನೆನಪುಗಳು ಬಿಕ್ಕಳಿಕೆ. ನೆನಪಾದಳು, ವ್ಯಥೆಯಾದಳು, ಕಥೆಯಾದಳು. ಎದೆಯಲ್ಲಿಯೇ ಮಡಗಿ. ಈಗ ಅವಳು ಹೃದಯ ಜನ್ಯವಾಗಿ ನೆನಪಾಗಿ ಉಳಿವಳು. ಇದು ಇನ್ನೂ ಅನೇಕ ಧ್ವನಿಗಳನ್ನು ನೀಡುವುದು. ಎದೆಯಲ್ಲಿಯೇ ಮಡಗಿ ಎಷ್ಟೊಂದು ಅರ್ಥಪೂರ್ಣ ಸಾಲುಗಳು ಅಲ್ಲವೇ? ಪುಟ್ಟ ಮಗು ಬೆಳೆದು ಮದುವೆಯಾಗಿ, ತಾಯಾಗಿ ಬದುಕು ನೋವು ನಲಿವುಗಳ ಜಂಝಾವಾತಗಳನೆಲ್ಲ ಈ ವ್ಯಥೆಯ ಕಥೆಯನ್ನು ನಮ್ಮ ವರಕವಿ ಮಾತ್ರ ಕಟ್ಟಿಕೊಡಬಲ್ಲರು. ಇಂತಹ ಕವಿತೆ ಕಟ್ಟಿಕೊಡಲು ಈಗ ಕಷ್ಟಸಾಧ್ಯವೇ ಸರಿ. ಉತ್ಸಾಹದಿಂದ ಶುರುವಾದ ಹುಡುಗಿಯ ಕಥೆ ವ್ಯಥೆಯ ನೆನಪಾದ ಬಗ್ಗೆ ನಿಜಕ್ಕೂ ಕಣ್ಣಾಲಿಗಳನ್ನು ಒದ್ದೆ ಮಾಡುತ್ತದೆ. ವಾಸ್ತವದ ಏರುಪೇರುಗಳನ್ನು, ಕಹಿಗಳನ್ನು, ಕಾವ್ಯ ರೂಪದಲ್ಲಿ ಕಟ್ಟಿಕೊಡುವಲ್ಲಿ ಅತ್ಯಂತ ನಿಪುಣರು ನಮ್ಮ ಅಂಬಿಕಾತನಯರು. ಹೀಗೇ ದುಃಖದ ಕಟ್ಟೆಯೊಡೆದು ಹರಿಯುವಾಗ ಹುಟ್ಟಿದ ಕವಿತೆಗಳು ಒಂದೆರಡಲ್ಲ.

*'ನೀ ಹಿಂಗ ನೋಡಬ್ಯಾಡ ನನ್ನ'*
*'ನೀ ಹಿಂಗ ನೋಡಿದರ ನನ್ನ'*
*'ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ'*

ಮನೆಯಲ್ಲಿ ಸೂತಕ. ಮಗನ ಶವದ ಎದುರು ಕೂತು ಹೆಂಡತಿಯ ಕಣ್ಣ ನೋಟ, ಅಸಹಾಯಕತೆ, ಕತ್ತಿಯಂತೆ ಇರಿದದ್ದು ತಡೆಯಲಾಗದೆ ಹುಟ್ಟಿದ್ದು ಈ ಕವಿತೆ. ಹಾಗೇ । ನನ ಕೈಯ ಹಿಡಿದಾಕೆ... ಸಹ ನಾಯಕನ ವ್ಯಥೆ ಅವಳೂ ಎಲ್ಲ ದುಃಖಿಗಳು ನಾನೂ ಈ ನೂ ಎನ್ನುವ ದೀರ್ಘ ವರ್ಣದಲ್ಲಿ ಹೇಳುವಾಗಲೇ ಅತ್ಯಂತ ಆರ್ದ್ರಭಾವದ ದನಿ ಕೇಳುವುದು.. ಹೇಳುತ್ತಾ ಹೋದರೆ ಪದಗಳು, ಪುಟಗಳು ಸಾಲವು. ಒಂದು ಬದುಕಿನ ಲೌಕಿಕ ಅಲೌಕಿಕಗಳೆಲ್ಲವನ್ನೂ ಸಮರ್ಥವಾಗಿ ನಿರೂಪಿಸುವ ಹಾಗೂ ಶಬ್ದಗಳನ್ನು ಕುಣಿಯುವಂತೆ ಮಾಡಿ ಕನ್ನಡವನ್ನೇ ಧನ್ಯಮಾಡಿದ ವಿಸ್ಮಯ ಕವಿ ಬೇಂದ್ರೆಯವರು.

ನಾಡು ನುಡಿ, ದೇಶ ಪ್ರೇಮ, ರೈತ ಯೋಧ, ಸಮಾಜದ ಅಂಕು ಡೊಂಕು, ಎಲ್ಲವನ್ನೂ ತಮ್ಮ ಕವನಗಳ ವಸ್ತುವನ್ನಾಗಿ ಮಾಡಿಕೊಂಡ ರೀತಿಯೇ ಬೆರಗಿನದು. ಅಂತೆಯೇ ಅವರು ಶಬ್ದಗಾರುಡಿಗ, ವರಕವಿ ಎನ್ನುವುದು.

ಅವರ ಜನ್ಮ ದಿನವಾದ ಇಂದು ಅವರ ಕವಿತೆಯ ಸಾಲುಗಳು ಮನ ತುಂಬಿ ಬಂದವು. ಕವಿ ಕಾವ್ಯ ಪರಿಚಯ ಸಾಮಾನ್ಯ. ಆದರೆ, ಅವರ ಬರಹವನ್ನು ಒಂದಿಷ್ಟು ಅಧ್ಯಯನ ಮಾಡಿ ತಿಳಿದುಕೊಂಡು ಅದನ್ನೇ ಅವರ ಚರಣಕರ್ಪಿಸಿ, ಜನ್ಮದಿನದ ನುಡಿನಮನ ಸಲ್ಲಿಸುವುದೇ ಕರ್ತವ್ಯ ಎನಿಸಿತು.ಈ ನಾಡು ಕಂಡ ಶ್ರೇಷ್ಠ ಕವಿವರ್ಯರಿಗೆ ಜನ್ಮದಿನದ ಸವಿ ನೆನಪಿಗೆ ಈ ಎರಡಕ್ಷರಗಳ ನುಡಿ ನಮನಗಳು.

**- ಸುನಿತಾ ಪ್ರಕಾಶ್**, ದಾವಣಗೆರೆ.

## ವಿಶ್ವಕರ್ಮ ಪರಿಷತ್ತಿನ ದಿನದರ್ಶಿಕೆ



ದಾವಣಗೆರೆ, ಜ.30- ಅಖಿಲ ಭಾರತ ವಿಶ್ವಕರ್ಮ ಪರಿಷತ್ತಿನ 2022ನೇ ಸಾಲಿನ ದಿನದರ್ಶಿಕೆಯನ್ನು ಚನ್ನಗಿರಿ ವಡ್ನಾಳ್ ಸಾವಿತ್ರಿ ಪೀಠದ ಶ್ರೀ ಶಂಕರ ಆತ್ಮಾನಂದ ಸರಸ್ವತಿ ಸ್ವಾಮೀಜಿ ಬಿಡುಗಡೆ ಮಾಡಿದರು.

ಪರಿಷತ್ತಿನ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ.ಸತೀಶ್ ಕುಮಾರ್, ಕಾರ್ಯದರ್ಶಿ ಡಾ.ಪಿ.ಮಹಾರುದ್ರಚಾರಿ, ರಾಜ್ಯ ಅಧ್ಯಕ್ಷಪ್ರಸನ್ನಕುಮಾರ್,ಜಿಲ್ಲಾಧ್ಯಕ್ಷಎಂ.ಇ.ಮೌನೇಶ್ವರಾಚಾರಿ, ಯುವ ಘಟಕದ ಅಧ್ಯಕ್ಷ ಆಂಜನೇಯ ಆಚಾರಿ, ಚಿತ್ರದುರ್ಗ ಜಿಲ್ಲಾ ಅಧ್ಯಕ್ಷ ಶಂಕರ ಮೂರ್ತಿ, ಚಳ್ಳಕೆರೆ ನಗರಸಭೆ ಉಪಾಧ್ಯಕ್ಷರಾದ ಮಂಜುಳಾ ಪ್ರಸನ್ನಕುಮಾರ್, ರಾಷ್ಟ್ರೀಯ ಕಾರ್ಯ ಕಾರಿಣಿ ಸದಸ್ಯ ರಾದ ಅಮ್ಮನಗುಡ್ಡ ತಿಪ್ಪೇಶ್ ಆಚಾರ್ಯ ಮತ್ತು ಸಮಾಜದ ಮುಖಂಡರಾದ ಕೆ.ಕಾಳಾಚಾರ್, ಹೊದಿಗೆರೆ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ರೈಲ್ವೆ ನಿಲ್ದಾಣದಲ್ಲಿ ಗಣರಾಜ್ಯೋತ್ಸವ



ದಾವಣಗೆರೆ, ಜ.30- ನಗರದ ರೈಲ್ವೆ ನಿಲ್ದಾಣದಲ್ಲಿ 73ನೇ ಗಣರಾಜ್ಯೋತ್ಸವವನ್ನು ರೈಲ್ವೆ ನೌಕರರು ಮತ್ತು ರೈಲ್ವೆ ಪೊಲೀಸರು ಒಗ್ಗೂಡಿ ಆಚರಿಸಿದರು. ವಿಶೇಷವಾಗಿ ರೈಲ್ವೆ ಇಲಾಖೆಯ ಪೌರ ಕಾರ್ಮಿಕರಾದ ಗಂಗಮ್ಮ ಮತ್ತು ಮಂಜುನಾಥ ಅವರಿಂದ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಮುಸ್ತಾಕ್ ಅಹಮದ್ ಡಿ. ಶೇಕ್ ಸೇರಿದಂತೆ ಇತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ, ಜ.29- ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ, 60 ಅಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ನಾಳೆ ನಿರ್ಮಲಾ ಬಜೆಟ್

(1ನೇ ಪುಟದಿಂದ) ವಲಯ ರಫ್ತಿಗಾಗಿ ನಿರ್ದಿಷ್ಟ ವಿನಾಯಿತಿ ಕೇಳುತ್ತಿದೆ.

ದೇಶದ ಸಾಕಷ್ಟು ಜನರು ಇನ್ನೂ ಆರ್ಥಿಕ ಬಿಕ್ಕಟ್ಟಿನಿಂದ ಹೊರ ಬಂದಿಲ್ಲ. ಉದ್ಯೋಗ, ಆದಾಯ ಹಾಗೂ ಸರಕುಗಳ ಬೇಡಿಕೆ ಹೆಚ್ಚಿಸುವ ವಾತಾವರಣ ರೂಪಿಸುವ ಬಜೆಟ್ ನಿರೀಕ್ಷೆ ಇದೆ ಎಂದು ಆರ್ಥಿಕ ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ. ಮಧ್ಯಮ ಹಾಗೂ ಕಡಿಮೆ ಆದಾಯದ ವರ್ಗಗಳಿಗೆ ನೆರವಾಗುವ ಕ್ರಮಗಳ ನಿರೀಕ್ಷೆ ಇದೆ. ಹಣದುಬ್ಬರಿಂದ ಈ ವರ್ಗದ ಮೇಲಿನ ಹೊರೆ ಹೆಚ್ಚಾಗಿದೆ ಎಂದು ಡೆಲೊಟೆ ಇಂಡಿಯಾ ಸಹಭಾಗಿ ಗೋಪಲ್ ಚೌಧರಿ ಹೇಳಿದ್ದಾರೆ.

# ಮೂಕ ಹಕ್ಕಿಗಳ ಪ್ರೀತಿಗೆ ಸೇತುವೆಯಾದ ವಾಟ್ಸಾಪ್

## ದಾಂಪತ್ಯಕ್ಕೆ ಕಾಲಿಟ್ಟ ಅಕ್ಷತಾ - ಸಂಜು

ಕೆ.ಉಚ್ಚಂಗೆಪ್ಪ

ಹರಪನಹಳ್ಳಿ, ಜ.30- ಅವರಿಬ್ಬರೂ ಮೂಗರು. ಜೊತೆಗೆ ಕಿವುಡುತನ. ಶಾಲೆಯ ಅಂಗಳದಲ್ಲಿ ಸ್ನೇಹಿತರಾಗಿದ್ದ ಅವರು, ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದಂತಿಯೇ ಅವರಿಬ್ಬರ ಮಧ್ಯದಲ್ಲಿನ ಸ್ನೇಹ ಪ್ರೀತಿಗೆ ತಿರುಗಿತ್ತು. ಪ್ರೀತಿಯ ಭಾವನೆಗಳನ್ನು ವ್ಯಕ್ತಪಡಿಸಲು ಅವರ ಮಧ್ಯೆ ಆರಂಭದಲ್ಲಿ ಇದ್ದದ್ದು ಕೇವಲ ಕೈಸನ್ನೆ, ಕಣ್‌ಸನ್ನೆ ವಾಹಕ ಮಾತ್ರ. ನಂತರ ಅವರಿಗೆ ವರದಾನವಾಗಿದ್ದು 'ವಾಟ್ಸಾಪ್'.

ಹರಪನಹಳ್ಳಿ ತಾಲ್ಲೂಕಿನ ಕಡಬಗೇರಿ ಗ್ರಾಮದ ಇಪ್ಪತ್ನಾಲ್ಕು ವರ್ಷದ ಅಕ್ಷತಾ ಬಿ. ಹಾಗೂ ಮೂಲತಃ ರಾಣೆಬೆನ್ನೂರು ತಾಲ್ಲೂಕಿನ ಮೇಡ್ಲೇರಿ ಗ್ರಾಮದ ಕೆ. ಸಂಜು ವಾಲ್ಮೀಕಿ ದಾಂಪತ್ಯಕ್ಕೆ ಕಾಲಿರಿಸಿದ ಈ ವಿಶೇಷ ಜೋಡಿ.

ಸಂಜು ಕೆ. ವಾಲ್ಮೀಕಿ ಹಾಗೂ ಅಕ್ಷತಾ ಇಬ್ಬರು ದಾವಣಗೆರೆ ನಗರದ ಡಿಸಿಎಂ ಟೌನ್‌ಶಿಪ್ ಬಡಾವಣೆಯಲ್ಲಿರುವ ಮೌನೇಶ್ವರ ಕಿವುಡ ಮತ್ತು ಮೂಗರ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇಬ್ಬರು ಅದೇ ಶಾಲೆಯಲ್ಲಿ 10ನೇ ತರಗತಿಯವರೆಗೂ ವ್ಯಾಸಂಗ ಮಾಡಿದ್ದಾರೆ.

ಆರಂಭದಲ್ಲಿ ಸಂಜು ಹಾಗೂ ಅಕ್ಷತಾ ನಡುವಿನ ಸ್ನೇಹ, ಪ್ರೀತಿಗೆ ತಿರುಗಿದೆ. 10ನೇ ತರಗತಿ ವ್ಯಾಸಂಗದ ನಂತರ ಇಬ್ಬರೂ ದೂರಾಗಿದ್ದಾರೆ. ಎಸ್ಸೆಸ್ಸೆಲ್ಸಿ ನಂತರ ಸಂಜು ಕೆ. ವಾಲ್ಮೀಕಿ ಬೆಂಗಳೂರು ನಗರದಲ್ಲಿ ಐಟಿಐ ವ್ಯಾಸಂಗ ಮಾಡಿ, ಖಾಸಗಿ ಕಂಪೆನಿ ಒಂದರಲ್ಲಿ ಉದ್ಯೋಗ ಸೇರಿದ್ದಾನೆ. ಇವರಿಬ್ಬರ ನಡುವಿನ ಪ್ರೀತಿಯ ಬೆಸುಗೆಯ ಕೊಂಡಿಯಾಗಿ ಮೊಬೈಲ್ ವಾಟ್ಸಪ್ ಆಪ್ ವರದಾನವಾಗಿದೆ. ಪರಸ್ಪರರು ತಮ್ಮ ಪ್ರೀತಿಯ ಭಾವನೆ, ಪ್ರೇಮದ ಕನಸು, ಕನವರಿಕೆಗಳನ್ನು ವಾಟ್ಸಪ್ ಸಂದೇಶದ ಮೂಲಕವೇ ವಿನಿಮಯ ಮಾಡಿಕೊಳ್ಳುವ ಮೂಲಕ ತಮ್ಮ ಪ್ರೇಮಸೌಧ ಕಟ್ಟಿದ್ದಾರೆ.



ಸಂಜು ಕೆ. ವಾಲ್ಮೀಕಿ ತನ್ನ ತಂದೆ- ತಾಯಿಗೆ ತಾನು ಅಮರವಾಗಿ ಪ್ರೀತಿಸುತ್ತಿರುವ ಅಕ್ಷತಾಳನ್ನು ಮದುವೆಯಾಗುವುದಾಗಿ ಸನ್ನೆ ಹಾಗೂ ಬರವಣಿಗೆ ಮೂಲಕ ವ್ಯಕ್ತಪಡಿಸಿದ್ದಾನೆ. ಇದಕ್ಕೆ ಸಂಜು ಕೆ. ವಾಲ್ಮೀಕಿ ಪೋಷಕರು, ಸಂತೋಷದಿಂದಲೇ ಒಪ್ಪಿಗೆ ಸೂಚಿಸಿದ್ದಾರೆ. ಯಾವಾಗ ತನ್ನ ಹಾಗೂ ಅಕ್ಷತಾಳ ಪ್ರೀತಿಗೆ ಪೋಷಕರು ಒಪ್ಪಿಗೆಯ ಮುದ್ರೆ ಒತ್ತಿದರೋ, ಅಲ್ಲಿಗೆ, ಸಂಜು ತನ್ನ ಪೋಷಕರ ನಿರ್ಧಾರವನ್ನು ಅಕ್ಷತಾಳಿಗೂ ಮುಟ್ಟಿಸಿದ್ದಾನೆ. ಕೊನೆಗೆ ಇಬ್ಬರೂ, ದಾವಣಗೆರೆ ನಗರದ ಜಿಲ್ಲಾ ನೋಂದಣಾಧಿಕಾರಿ ಕಚೇರಿಗೆ ತೆರಳಿ, ದಾಂಪತ್ಯಕ್ಕೆ ಕಾಲಿಟ್ಟಿದ್ದಾರೆ. ಅದರ ನೋಂದಣಿಯನ್ನು ಸಹ ಮಾಡಿಸಿದ್ದಾರೆ.

ಸಂಜು ಹಾಗೂ ಅಕ್ಷತಾಳ ಮದುವೆಯ ಸುದ್ದಿ ಹರಡುತ್ತಿದ್ದಂತಿಯೇ ಕುಪಿತಗೊಂಡ ಅಕ್ಷತಾ ಪೋಷಕರು, ತಮ್ಮ ಮಗಳನ್ನು ಅಪಹರಿಸಲಾಗಿದೆ ಎಂದು ಚಿಗಟೇರಿ ಪೊಲೀಸ್ ಠಾಣೆಯಲ್ಲಿ ದೂರು ನೀಡುತ್ತಾರೆ.

ನವ ದಂಪತಿಯನ್ನು ಠಾಣೆಗೆ ಕರೆತಂದ ಪೊಲೀಸರು ಇಬ್ಬರನ್ನು ಬರವಣಿಗೆಯ ಮೂಲಕವೇ ವಿಚಾರಣೆಗೆ ಒಳಪಡಿಸಿದರು. ನವಜೋಡಿ, ಪೋಷಕರ ಆರೋಪವನ್ನು ಅಲ್ಲಗಳೆಯುವ ಮೂಲಕ, ತಮ್ಮ ದಶಕದ ಪ್ರೀತಿ, ಪ್ರೇಮವನ್ನು ಎಳೆಎಳೆಯಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಇದರಿಂದ ಪೊಲೀಸರು, ದೂರುಕೊಟ್ಟ ಪೋಷಕರು ಹಾಗೂ ಸೊಸೆಯಾಗಿ ಸ್ವೀಕರಿಸಿದ ಸಂಜು ಪೋಷಕರನ್ನು ಕೂಡಿಸಿಕೊಂಡು, ಉಭಯರಿಗೂ ಬುದ್ಧಿ ಮಾತು ಹೇಳಿ, ಸಂಜು ಮತ್ತು ಅಕ್ಷತಾ ದಂಪತಿಗೆ ಯಾರಿಂದಲೂ ತೊಂದರೆಯಾಗದಂತೆ ನಡೆದುಕೊಳ್ಳಬೇಕು ಎಂದ ಹೇಳಿದ್ದಾರೆ.

ಹರಪನಹಳ್ಳಿ ಪಟ್ಟಣದ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿರುವ ಸಂಜು ತಂದೆ, ಅಕ್ಷತಾ ನಮ್ಮ ಮನೆಯ ಸೊಸೆ ಅಲ್ಲ. ಆಕೆ, ನಮ್ಮ ಮನೆಯ ನಂದಾದೀಪ. ಆಕೆಯನ್ನು ಸೊಸೆಯ ರೂಪದಲ್ಲಿ ಮಗಳಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಅದನ್ನು ಪರಿಪಾಲಿಸುತ್ತೇವೆ ಎಂದು ಠಾಣೆಯಲ್ಲಿ ವಾಗ್ದಾನ ಮಾಡುವ ಮೂಲಕ ಸೊಸೆ ಅಕ್ಷತಾಳನ್ನು ಮನೆಗೆ ಕರೆದೊಯ್ದಿದ್ದಾರೆ.

## ಒಳಿತು ಬಯಸಿದ ಶ್ರೀಗಳು

(1ನೇ ಪುಟದಿಂದ) ಕಾರ್ಯಕ್ರಮಗಳಿಂದ ದೊರಕುವ ಪುಣ್ಯ ವಿಶೇಷದ ಬಗ್ಗೆ ಹಾಗೂ ಇದಕ್ಕೆ ಸಹಾಯ, ಸಹಕಾರ ನೀಡಿದವರ ಬಗ್ಗೆ ಮಠದ ಪೀಠಾಧಿಪತಿ ಶಿವಯೋಗಿ ಮಹಾಸ್ವಾಮಿಗಳು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ವಿವರಿಸಿದರು.

ಡಾ. ಮಹೇಶ್ವರ ಶ್ರೀ, ಗುರು ಮಹೇಶ್ವರ ಶ್ರೀ, ಗುರುಶಾಂತ ಶಿವಯೋಗಿ ಶ್ರೀ ನೆಗಳೂರು, ಅಭಿನವರುದ್ರ ಮಲ್ಲಿಕಾರ್ಜುನ ಶ್ರೀ ಅಕ್ಕಿಆಲೂರು, ಹಾವೇರಿ ಬಣ್ಣದ ಮಠ ಶ್ರೀ, ಗುರು ನಂಜೇಶ್ವರ ಶ್ರೀ ಕೂಡಲ, ಜಗದೀಶ್ವರ ಶ್ರೀ ಕುಮಾರಪಟ್ಟಂ, ನಂಜುಂಡ ಪಂಡಿತಾರಾಧ್ಯ ಶ್ರೀ ಹೆರೂರ, ಶಾಸಕ ಅರುಣಕುಮಾರ ಪೂಜಾರ, ಆಡಳಿತಮಂಡಳಿ ಅಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣನವರ, ರವೀಂದ್ರಗೌಡ ಪಾಟೀಲ ಮತ್ತಿತರರು ಪಾಲ್ಗೊಂಡಿದ್ದರು.

## ಸಿಎಂಗೆ ದೂರು ನೀಡಿದ್ದೇನೆ

(1ನೇ ಪುಟದಿಂದ) ನಾನು ಈ ಎಲ್ಲಾ ಪ್ರಯತ್ನ ಮಾಡುತ್ತಿದ್ದು, ಪಕ್ಷಕ್ಕೆ ಮುಜುಗರ ತರುವುದಾಗಲೀ, ಪಕ್ಷದ ವಿರುದ್ಧವಾಗಲೀ ನಡೆದುಕೊಳ್ಳುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಕೆಲವು ಸಚಿವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂತಹವರ ಹೆಸರನ್ನು ಸಿಎಂ ಹಾಗೂ ಪಕ್ಷದ ಅಧ್ಯಕ್ಷರ ಬಳಿ ಹೇಳಿ ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ ಎಂದು ಹೇಳಿದರು.

ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಈ ವಿಷಯವಾಗಿ ಒಂದು ವಾರದೊಳಗಾಗಿ ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ಸುಧಾರಣೆ - ಪರಿಹಾರ ದೊರೆಯದಿದ್ದರೆ ಪಕ್ಷದ ಹಿತದೃಷ್ಟಿಯಿಂದ ಹೋರಾಟಕ್ಕೆ ಬದ್ಧನಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು.

## ಪೆಗಾಸಸ್ : ಹಕ್ಕುಚ್ಯುತಿ ಅರ್ಜಿ

(1ನೇ ಪುಟದಿಂದ) ಉದ್ದೇಶಪೂರ್ವಕಾಗಿ ಸದನವನ್ನು ತಪ್ಪು ದಾರಿಗೆ ಎಳೆದಿದ್ದಾರೆ ಎಂದು ಚೌಧರಿ ಪತ್ರದಲ್ಲಿ ಹೇಳಿದ್ದಾರೆ.

ಪೆಗಾಸಸ್ ಖರೀದಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲೂ ಸಹ ಸರ್ಕಾರ ನೇರ ಮಾಹಿತಿ ನೀಡದೇ ತಪ್ಪು ದಾರಿಗೆ ಎಳೆದಿದೆ ಎಂದೂ ಅವರು ಹೇಳಿದ್ದಾರೆ.


**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ
ಎಂಸಿಸಿ ಬಿ ಬ್ಲಾಕ್‌ನಲ್ಲಿ
ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
**94496 84768**
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಸೈಟ್ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ
ಕಲ್ಯಾಣ ಮಂಟಪದ ಹಿಂಭಾಗ
41x91 ದಕ್ಷಿಣ ದಿಕ್ಕಿನ
ಸೈಟ್ ಮಾರಾಟಕ್ಕಿದೆ. ವಿಚಾರಿಸಿ:
**98448 82366**

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ,
ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್.
ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ
ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು
ಮನೆಗಳು, ಹೊಲ ಮಾರಾಟಕ್ಕಿವೆ.
**97315 12365**

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ. 02.02.2022ರ ಬುಧವಾರ ಮತ್ತು
03.02.2022ರ ಗುರುವಾರದಂದು
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
**08192-222292**

**ಸೈಟುಗಳು ಮಾರಾಟಕ್ಕಿವೆ**
ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ
ಪೂರ್ವಾಭಿಮುಖದ 30x35
ಅಡಿವುಳ್ಳ ಸೈಟುಗಳು ಮಾರಾಟಕ್ಕಿವೆ.
**ಸಂಪರ್ಕಿಸಿ : 94486 81376**
**98440 19575**

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು
ಬೋರ್‌ವೆಲ್ ಕೊರೆಯಲಾಗುವುದು. ಮನೆಯ
ಒಳಗಡೆ ಮತ್ತು ಹೊರಗಡೆ 300-450
ಅಡಿಯವರೆಗೆ ಕೊರೆಯಲಾಗುವುದು.
**99640 78484, 95906 15776**

**ಇ.ಶ್ರಮ ಕಾರ್ಡ್ ಉಚಿತವಾಗಿ ಮಾಡಿಕೊಡಲಾಗುತ್ತದೆ**
ಶನಿವಾರ ಮತ್ತು ಸೋಮವಾರ ಮಾತ್ರ
ಮಾಡಿಕೊಡಲಾಗುತ್ತದೆ. ಬಂದೋಳ್ ರಾಮಪ್ಪ
ಕಾಂಪ್ಲೆಕ್ಸ್, ದುರ್ಗಾಂಬಿಕ ದೇವಸ್ಥಾನ
ಹತ್ತಿರ ನಿಟುವಳ್ಳಿ. ದಾವಣಗೆರೆ.
**ಫೋ. : 76250 89210**

**ಬೇಕಾಗಿದ್ದಾರೆ**
ಜೀನಿ ಮಿಲೆಟ್ ಹೆಲ್ತ್ ಮಿಕ್ಸ್‌ಗೆ
ದಾವಣಗೆರೆ ಜಿಲ್ಲೆಯ ಜಗಳೂರು
ತಾಲ್ಲೂಕಿಗೆ ಮಾತ್ರ ವಿತರಕರು
(Distributers) ಬೇಕಾಗಿದ್ದಾರೆ.
**99804 64968**

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2
ಬೆಡ್ ರೂಂ, ಹೊಸ ಮನೆ, ವಿಳಾಸ :
ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್, ಡೋ.
ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
**ಸಂಪರ್ಕಿಸಿರಿ : 70198 78789**
(Pets Not Allowed)

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಬಿಐಇಟಿ ಹತ್ತಿರ, ಸ್ವಾಮಿ
ವಿವೇಕಾನಂದ ಬಡಾವಣೆ, 3ನೇ ಮೇನ್,
1ನೇ ಕ್ರಾಸ್, ನಂ. 1854/2,
1ನೇ ಮಹಡಿಯಲ್ಲಿ 2 ಬಿಹೆಚ್‌ಕೆ ಮನೆ
ಬಾಡಿಗೆಗೆ ಇದೆ.
**97420 90943**

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವ ಸೈಬರ್‌ನಲ್ಲಿ
ಡಿಟಿಪಿ ಕೆಲಸಕ್ಕೆ ಯುವಕ ಮತ್ತು
ಯುವತಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
**ಮೊ : 80737 82814**

**ಸುವರ್ಣಾವಕಾಶ**
ನೇರವಾಗಿ S.S.L.C. & PUC (Arts, Com, PCMB ಪರೀಕ್ಷೆ ಬರೆಯಬಹುದು.
ಕೊನೆಯ ದಿನಾಂಕ 31.1.2022
ಸಿಂಚನ ಕರೆಸ್ಪಾಂಡೆನ್ಸ್ ಕಾಲೇಜ್,
ದಾವಣಗೆರೆ.
**ಮೊ: 85532 78258, 90195 80600**

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ
1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲಸಂಶೋಧಕರು
**94492 02888**

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್
ದಾವಣಗೆರೆ.
ರೂಂ ಬಾಡಿಗೆಗೆ ಇದೆ
ಚಾಮರಾಜ ಪೇಟೆ, ದಾವಣಗೆರೆ.
**ಫೋ. : 82177 72482**

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್.
ನಂ. 1935/7, 44x60 ಅಳತೆಯಲ್ಲಿ
6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
**99007 00091**

**Urgent House For Sale**
30x40 House, Ground Floor & 1st Floor at High Tech Hospital Road, Jayanagara 'A' Block, Near Yogi Reddy Building.
Contact : **86187 39278**
**(Umadevi)**

**ಬೇಕಾಗಿದ್ದಾರೆ**
ಶ್ರೀ ಮಂಜುನಾಥ
ಆಟೋಮೊಬೈಲ್ಸ್‌ನಲ್ಲಿ
ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
**99729 74626**

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ,
ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ,
ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ,
ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ,
ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ
ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
**ಮೊ : 81339 33804**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ,
ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು,
ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ
ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
**80955 09025**
ಕೆಲಸ : 100% ಗ್ಯಾರಂಟಿ

**JOBS**
Sales Manager/Executives
Any Degree (English, Computer Knowledge)
Office Job/Marketing/
Field Work, Male/Female
Freshers/Experienced
**98444 92888**


## ಆಸ್ಪತ್ರೆ ಸ್ಥಳಾಂತರಿಸಲು ಎಸ್‌ಡಿಪಿಐ ಆಗ್ರಹ

ದಾವಣಗೆರೆ,ಜ.30- ಸೋಷಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಜಿಲ್ಲಾ ಸಮಿತಿ ಸಭೆಯು ಜಿಲ್ಲಾಧ್ಯಕ್ಷ ಜಬಿವುಲ್ಲಾ ಅಧ್ಯಕ್ಷತೆಯಲ್ಲಿ ಮೊನ್ನೆ ಜರುಗಿತು.

ಸಭೆಯಲ್ಲಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಅಫ್ಸರ್ ಕೊಡ್ಲಿಪೇಟೆ ಪಾಲ್ಗೊಂಡಿದ್ದರು. ದಕ್ಷಿಣ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಯನ್ನು ಸ್ಮಾರ್ಟ್ ಸಿಟಿ ಯೋಜನೆ ಅಡಿ ನಿರ್ಮಾಣವಾಗಿರುವ ನೂತನ ಕಟ್ಟಡಕ್ಕೆ ಸ್ಥಳಾಂತರ ಮಾಡಿ, ಸ್ಕ್ಯಾನಿಂಗ್ ಯಂತ್ರ ಅಳವಡಿಸುವುದು ಸೇರಿದಂತೆ ಪಂಚಾಯಿತಿ ಚುನಾವಣೆ, ವಕ್ಫ್ ಆಸ್ತಿ ಸಮಸ್ಯೆ, ಅಲ್ಪ ಸಂಖ್ಯಾತ, ಹಿಂದುಳಿದ ವರ್ಗಗಳ ಮೇಲಿನ ದೌರ್ಜನ್ಯ ಮತ್ತಿತರೆ ವಿಷಯಗಳ ಕುರಿತು ಚರ್ಚಿಸಿ ಹೋರಾಟ ನಡೆಸಲು ತೀರ್ಮಾನಿಸಲಾಯಿತು.

# ಅಧಿಕಾರಿಗಳ ಅನಿರೀಕ್ಷಿತ ಭೇಟಿ

(1ನೇ ಪುಟದಿಂದ) ವಸತಿ ನಿಲಯಗಳಿಗೆ ಭೇಟಿ ನೀಡಿ, ಅವರ ಆರೋಗ್ಯದ ಬಗ್ಗೆ ವೀಕ್ಷಣೆ ಮಾಡಲಾಗಿದೆ. ನಿಲಯದಲ್ಲಿರುವ ಮಕ್ಕಳು ಮೊಬೈಲ್ ಗಳನ್ನು ಬಳಸದೇ ಚೆನ್ನಾಗಿ ಪಠ್ಯ ಪುಸ್ತಕಗಳನ್ನು ಓದಿ, ಮುಂದೆ ಬರುವ ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಬೇಕು ಎಂದು ಸಲಹೆ ನೀಡಿದರು. ಸಮಾಜ ಕಲ್ಯಾಣ ಇಲಾಖೆಯಿಂದ ಬರುವ ಎಸ್ಸಿ, ಎಸ್ಟಿ ಮಕ್ಕಳಿಗೆ ಕೊಡುವ ವಿದ್ಯಾರ್ಥಿ ವೇತನ ಮತ್ತು ಪ್ರಥಮ ಶ್ರೇಣಿಯಲ್ಲಿ ಪಾಸಾದ ಎಲ್ಲಾ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರಗಳ ಸೌಲಭ್ಯ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಸರ್ಕಾರ ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಓದಲು ಸರ್ಕಾರ ಉಚಿತವಾಗಿ ಸ್ಕಾಲರ್ ಶಿಪ್. ನೋಟ್ ಬುಕ್ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ಒದಗಿಸುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ಕುಡಿಯಲು ಬಿಸಿನೀರು, ಟೀ, ಬಿಸ್ಕೀಟ್, ಮೊಟ್ಟೆ, ಬಾಳೆಹಣ್ಣನ್ನು ಮತ್ತು ಊಟ, ತಿಂಡಿಗಳನ್ನು ಸರ್ಕಾರದ ಮೇನು ಚಾರ್ಟ್ ಪ್ರಕಾರ ಕೊಡಬೇಕು ಮತ್ತು ಕೋವಿಡ್ 19 ಪಟ್ಟಣದಲ್ಲಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕೈಗೆ ಸ್ಯಾನಿಟೈಜರ್. ಮಾಸ್ಕ್. ಸಾಮಾಜಿಕ ಅಂತರ ಕಾಯ್ದುಕೊಂಡು ಇರಲು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪನಿರ್ದೇಶಕರ ಕಚೇರಿ ಅಧೀಕ್ಷಕಿ ಗೀತಾ. ತನಿಖಾ ಸಹಾಯಕರಾದ ನಾಗರತ್ನ ಮತ್ತು ನಿಲಯ ಮೇಲ್ವಿಚಾರಕರಾದ ಮಂಗಳ, ಅಡುಗೆ ಸಿಬ್ಬಂದಿಗಳಾದ ಸರೋಜಮ್ಮ.ನಾಗರತ್ನಮ್ಮ. ಸುಶೀಲಮ್ಮ.ಲಕ್ಷ್ಮಮ್ಮ. ಕರಿಬಸಮ್ಮ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

# ದೇಶವನ್ನು ಗೆದ್ದಲಿನಂತೆ ಹಾಳು ಮಾಡುತ್ತದೆ

(1ನೇ ಪುಟದಿಂದ) ಸಂಪೂರ್ಣ ಸಾಕ್ಷರತೆ, ಶೂನ್ಯ ಅಪಘಾತ ಹಾಗೂ ಆಹಾರ ಭದ್ರತೆಯ ತಂತ್ರಜ್ಞಾನ ಹೊಂದಿರಬೇಕು ಎಂದು ಬಯಸಿದ್ದಾರೆ ಎಂದು ಮೋದಿ ತಿಳಿಸಿದ್ದಾರೆ.

ನಾವೆಲ್ಲರೂ ಜೊತೆಯಾಗಿ ಶ್ರಮಿಸಿದಾಗ ಹಾಗೂ ಯುವ ಪೀಳಿಗೆ ಈ ಗುರಿಗಳ ಕಡೆ ಸಾಗಿದಾಗ ನಿಜಕ್ಕೂ ಭಾರತವನ್ನು ಬಾಲಕಿಯ ಆಶಯದಂತೆ ರೂಪಿಸಬಹುದು ಎಂದು ಪ್ರಧಾನಿ ತಿಳಿಸಿದ್ದಾರೆ.

ಭ್ರಷ್ಟಾಚಾರ ಮುಕ್ತ ಭಾರತದ ಬಗ್ಗೆ ಉತ್ತರ ಪ್ರದೇಶದ ಬಾಲಕಿಯೊಬ್ಬರು ತಿಳಿಸಿದ್ದಾರೆ. ಭ್ರಷ್ಟಾ ಚಾರದ ದೇಶವನ್ನು ಗೆದ್ದಲಿನಂತೆ ಟೊಳ್ಳು ಮಾಡುತ್ತಿದೆ. ಇದರಿಂದ ಮುಕ್ತವಾಗಲು 2047ರವರೆಗೆ ಕಾಯಬೇಕಿಲ್ಲ.

ಜನರು ಜೊತೆಯಾಗಿ ಈ ದಿಸೆಯಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಗುರಿ ತಲುಪಬೇಕಿದೆ ಎಂದು ಮೋದಿ ಹೇಳಿದ್ದಾರೆ.

## ಮೂರನೇ ಅಲೆ ವಿರುದ್ಧ ಯಶಸ್ಸಿನ ಹೋರಾಟ

(1ನೇ ಪುಟದಿಂದ) ಎಂದಿದ್ದಾರೆ. ಇದುವರೆಗೂ ನಾಲ್ಕೂವರೆ ಕೋಟಿ ಮಕ್ಕಳಿಗೆ ಕೊರೊನಾದ ಮೊದಲ ಡೋಸ್ ಲಸಿಕೆ ನೀಡಿರುವುದು ಹೆಮ್ಮೆಯ ಸಂಗತಿ. ಮೂರ್ನಾಲ್ಕು ವಾರಗಳಲ್ಲಿ 15ರಿಂದ 18 ವರ್ಷದ ಶೇ.60ರಷ್ಟು ಮಕ್ಕಳು ಲಸಿಕೆ ಪಡೆದಿದ್ದಾರೆ. ಇದು ಮಕ್ಕಳ ರಕ್ಷಣೆ ಹಾಗೂ ಅವರ ಕಲಿಕೆಗೆ ನೆರವಾಗಲಿದೆ ಎಂದು ಮೋದಿ ತಿಳಿಸಿದ್ದಾರೆ.

ಮೊದಲ 20 ದಿನಗಳಲ್ಲಿ ಕೋಟಿಗೂ ಹೆಚ್ಚು ಜನ ಮುನ್ನೆಚ್ಚರಿಕೆ ಡೋಸ್ ಪಡೆದಿದ್ದಾರೆ. ದೇಶೀಯ ಲಸಿಕೆಗಳ ಮೇಲೆ ಜನರು ನಂಬಿಕೆ ಇರಿಸಿರುವುದೇ ನಮ್ಮ ಅತಿ ದೊಡ್ಡ ಶಕ್ತಿ ಎಂದು ಪ್ರಧಾನಿ ಹೇಳಿದ್ದಾರೆ.

ಕೊರೊನಾದ ಹೊಸ ಅಲೆಯ ವಿರುದ್ಧ ಭಾರತೀಯ ಮಹಾ ಯಶಸ್ಸಿನ ಹೋರಾಟ ನಡೆಸುತ್ತಿದೆ ಎಂದಿರುವ ಮೋದಿ, ಜನರಿಗೆ ಸುರಕ್ಷತೆ ಇರಬೇಕು. ಆರ್ಥಿಕ ಚಟುವಟಿಕೆಗಳನ್ನು ಕಾಯ್ದುಕೊಳ್ಳಬೇಕು ಎಂಬುದು ದೇಶದ ಪ್ರತಿಯೊಬ್ಬರ ಆಶಯವಾಗಿದೆ ಎಂದು ಹೇಳಿದ್ದಾರೆ.

# ಕಳ್ಳತನ ಪ್ರಕರಣ: ನಾಲ್ವರ ಬಂಧನ 5 ಲಕ್ಷಕ್ಕೂ ಅಧಿಕ ಮೌಲ್ಯದ ಸ್ವತ್ತು ವಶ

ದಾವಣಗೆರೆ, ಜ.30- ಸರ್ಕಾರಿ ಶಾಲೆಯ ಕಟ್ಟಡ ನಿರ್ಮಾಣ ಸಾಮಗ್ರಿ ಕಳ್ಳತನ ಸೇರಿದಂತೆ ಪ್ರತ್ಯೇಕ ಎರಡು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳ ಬಂಧಿಸಿರುವ ಹರಿಹರ ಗ್ರಾಮಾಂತರ ಪೊಲೀಸರು ಒಟ್ಟು 5 ಲಕ್ಷದ 20 ಸಾವಿರ ಮೌಲ್ಯದ ಸ್ವತ್ತು ವಶಪಡಿಸಿಕೊಂಡಿದ್ದಾರೆ.

ಇದೇ ದಿನಾಂಕ 15 ರ ರಾತ್ರಿ ಹರಿಹರ ತಾಲ್ಲೂಕು ಸಲಗನಹಳ್ಳಿ ಗ್ರಾಮದ ಕಂಟ್ರಾಕ್ಟರ್ ಹೆಚ್. ಶಿವಕುಮಾರ್ ಬನ್ನಿಕೋಡು ಸರ್ಕಾರಿ ಶಾಲೆಯ ಕಟ್ಟಡ ನಿರ್ಮಾಣದ ಕಬ್ಬಿಣ ಕಳುವಾದ ಬಗ್ಗೆ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಅಂತೆಯೇ ಇದೇ ದಿನಾಂಕ 27ರಂದು ರಾತ್ರಿ ಹರಿಹರ ತಾಲ್ಲೂಕು ಅಮರಾವತಿ ಗ್ರಾಮದ ಸುರೇಶ್ ಅವರು ರೂಟಿವೇಟರ್ ಕಳುವಾದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್‌ಪಿ ಹಾಗೂ ಹರಿಹರ ವೃತ್ತ ಸಿಪಿಐ ಮಾರ್ಗದರ್ಶನದಲ್ಲಿ ಹರಿಹರ ಗ್ರಾಮಾಂತರ ಠಾಣೆ ಪಿಎಸ್‌ಐ ವೀರಬಸಪ್ಪ ಕುಸಲಾಪುರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಎಎಸ್‌ಐ ಮಂಜುಳಾ, ಸೈಯ್ಯದ್ ಗಫಾರ್, ದ್ವಾರಕೀಶ್, ಕರಿಯಪ್ಪ, ವೆಂಕಟೇಶ, ಶ್ರೀಧರ ಬಣಕಾರ, ಹಳ್ಳಿ ಮಹಾಂತೇಶ, ಅನಿಲ್ ಕುಮಾರ್, ಆನಂದ, ನವೀನ, ರಮೇಶ್, ಹಜರತ್ ಅಲಿ, ಬಾಲರಾಜನಾಯ್ಕ, ಸುಶೀಲಮ್ಮ, ಸಿದ್ದಪ್ಪ, ರಾಘವೇಂದ್ರ ಮತ್ತು ಶಾಂತರಾಜ ಒಳಗೊಂಡ ತಂಡ ಇಂದು ಈ ಎರಡೂ ಕಳ್ಳತನ ಪ್ರಕರಣಗಳ ಬೇಧಿಸಿ, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ಒಂದು ಲಕ್ಷ ಮೌಲ್ಯದ 1,270 ಕೆಜಿ ಕಬ್ಬಿಣ, 1 ಲಕ್ಷ 20 ಸಾವಿರ ಮೌಲ್ಯದ ರೂಟಿವೇಟರ್ ಮತ್ತು ಕೃತ್ಯಕ್ಕೆ ಬಳಸಿದ್ದ ಮೂರು ಲಕ್ಷ ಮೌಲ್ಯದ ಲಾರಿ ವಶಪಡಿಸಿಕೊಂಡಿದ್ದಾರೆ. ಪ್ರಕರಣದ ಮತ್ತೋರ್ವ ಆರೋಪಿ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ಮುಂದುವರೆಸಿದ್ದಾರೆ.

## ತೋಳಹುಣಸೆ : ಕೆನರಾ ಬ್ಯಾಂಕ್‌ನಿಂದ ಬ್ಯೂಟಿ ಪಾರ್ಲರ್ ತರಬೇತಿ

ದಾವಣಗೆರೆ, ಜ.30- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಮತ್ತು ಜಿಲ್ಲಾ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಮಹಿಳೆಯರಿಗಾಗಿ 30 ದಿನಗಳ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಫೆಬ್ರವರಿ 2ರಂದು ನೇರವಾಗಿ ತರಬೇತಿ ಸಂಸ್ಥೆಗೆ ಭೇಟಿ ನೀಡಿ ಅಥವಾ ದೂರವಾಣಿ 79751 39332/ 70199 80484/ 99641 11314/ 95383 95817/ 94819 77076 ನಂಬರ್ ಮುಖಾಂತರ ಹೆಸರು ನೋಂದಾಯಿಸಬಹುದು.

## ವ್ಯಕ್ತಿತ್ವ ವಿಕಸನ ಉಪನ್ಯಾಸ



ದಾವಣಗೆರೆ,ಜ.30- ನಗರದ ಮಾಂಟೆಸೊರಿ ಕಾನ್ವೆಂಟ್ ನಲ್ಲಿ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ ನಡೆಯಿತು.

ಶರೀರ ಶಾಸ್ತ್ರ, ಮನಃಶ್ಶಾಸ್ತ್ರ ಮತ್ತು ಅಧ್ಯಾತ್ಮದ ಪ್ರಕಾರ ಆಂತರಿಕ ಶಕ್ತಿ ಎಂದರೇನು, ಶಕ್ತಿಯ ಮೂಲ ಯಾವುದು, ಶಕ್ತಿಯ ಕೇಂದ್ರಗಳು ಎಲ್ಲಿರುತ್ತವೆ, ಸಾಧನೆ ಮತ್ತು ಸಿದ್ಧಿಗೆ ಉಪಯೋಗಿಸುವ ಬಗೆ ಹೇಗೆ ಎಂಬುದನ್ನು ವೈಜ್ಞಾನಿಕ ವಿವರಣೆಯೊಂದಿಗೆ ಕತೆಗಳ ಮೂಲಕ ಉಪನ್ಯಾಸಕ ಗಂಗಾಧರ ಬಿ.ಎಲ್.ನಿಟ್ಟೂರ್ ಮಕ್ಕಳಿಗೆ ತಿಳಿಸಿ ಕೊಟ್ಟರು. ಸಂಸ್ಥಾಪಕರಾದ ಮಲ್ಲಮ್ಮ ನಾಗರಾಜ್ ಸ್ವಾಗತಿಸಿದರು.

# ಹೊಸ ಕುಂದುವಾಡದಲ್ಲಿ ಸಿ.ಸಿ. ರಸ್ತೆ ಕಾಮಗಾರಿ ಅವೈಜ್ಞಾನಿಕ : ಅಸಮಾಧಾನ



ದಾವಣಗೆರೆ, ಜ.30- ಸಮೀಪದ ಹೊಸ ಕುಂದುವಾಡ ಗ್ರಾಮದ ಮುಖ್ಯ ರಸ್ತೆಯಲ್ಲಿ ಕೈಗೊಂಡಿರುವ ಸಿ.ಸಿ. ರಸ್ತೆ ಕಾಮಗಾರಿ ಅವೈಜ್ಞಾನಿಕ ಹಾಗೂ ಕಳಪೆಯಿಂದ ಕೂಡಿದ್ದು, ಬಿಲ್ಲುಗಳನ್ನು ತಡೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ದಾವಣಗೆರೆ ನಗರ ಪಾಲಿಕೆಯ 43 ನೇ ವಾರ್ಡ್ ನ ಹೊಸ ಕುಂದವಾಡದಲ್ಲಿ ಮೊದಲ ಬಾರಿಗೆ ಊರಿಗೆ ರಸ್ತೆಯಾಗುತ್ತಿದ್ದು, ಅದನ್ನಾದರೂ ಗುಣಮಟ್ಟದಲ್ಲಿ ಮಾಡುವ ಬದಲು ಅಸಮರ್ಪಕ ಮೆಟ್ಲಿಂಗ್, ಗುಣಮಟ್ಟದ ವಸ್ತುಗಳನ್ನು ಸಿಸಿ ರಸ್ತೆ ಕಾಮಗಾರಿಗೆ ಉಪಯೋಗಿಸದ ಕಾರಣ ರಸ್ತೆಗೆ ಹಾಕಿರುವ ಕಾಂಕ್ರೀಟ್ ಕೈಯಿಂದ ಮುಟ್ಟಿದರೆ ಪುಡಿ ಪುಡಿಯಾಗುತ್ತಿರುವುದೇ ಅವೈಜ್ಞಾನಿಕ ಕಾಮಗಾರಿಗೆ ಹಿಡಿದ ಕೈ ಗನ್ನಡಿಯಾಗಿದೆ.

ಹೊಸದಾಗಿ ನಿರ್ಮಿಸುತ್ತಿರುವ ಸಿಸಿ ರಸ್ತೆಯ ಎರಡೂ ಬದಿಯಲ್ಲಿರುವ ಹಳೇಯ ಬಾಕ್ಸ್ ಚರಂಡಿಗಳನ್ನು ಪುನರ್ ನಿರ್ಮಿಸದೇ ಹಾಗೆಯೇ ರಸ್ತೆ ನಿರ್ಮಿಸಲಾಗುತ್ತಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು.

950 ಮೀಟರ್ ರಸ್ತೆಗೆ ಒಟ್ಟು 1 ಕೋಟಿ ರೂಪಾಯಿಗೂ ಹೆಚ್ಚು ವ್ಯಯ ಮಾಡುತ್ತಿರುವುದು ದುರಂತದ ಸಂಗತಿ. ಕೇವಲ 60 ಲಕ್ಷ ರೂ.ಗಳಲ್ಲಿ ಆಗಬೇಕಿದ್ದ ಕಾಮಗಾರಿಗೆ 1 ಕೋಟಿ ರೂ.ಗೂ ಹೆಚ್ಚು ವ್ಯಯ ಮಾಡುತ್ತಿರುವ ನಗರ ಪಾಲಿಕೆ ಅಧಿಕಾರಿಗಳು ಸರ್ಕಾರದ ಹಣ ದೋಚಲು ಅವೈಜ್ಞಾನಿಕ, ಕಳಪೆ ಕಾಮಗಾರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಕಾಮಗಾರಿಯನ್ನು ಸರ್ಕಾರದ ಮಾರ್ಗಸೂಚಿ ಪ್ರಕಾರ ಮಾಡದೆ ತರಾತುರಿಯಲ್ಲಿ ಪೂರ್ಣಗೊಳಿಸುತ್ತಿದ್ದಾರೆ. ಕಾಮಗಾರಿ ವೀಕ್ಷಣೆಗೆ ಯಾವುದೇ ಅಧಿಕಾರಿಗಳು ಬಂದು ಕಾಮಗಾರಿಯ ಪರಿಶೀಲನೆ ಮಾಡಿಲ್ಲ. ಆದ್ದರಿಂದ ಈ ಕಾಮಗಾರಿಯನ್ನು ಸರಿಯಾದ ರೀತಿಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಹಾಗೂ ಗುಣಮಟ್ಟದ ಕಾಮಗಾರಿಯನ್ನು ಮಾಡಲು ಆದೇಶಿಸಬೇಕು. ಈಗಾಗಲೇ ಆಗಿರುವ ಕಾಮಗಾರಿಯ ಬಿಲ್ಲನ್ನು ತಡೆ ಹಿಡಿಯಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸುದ್ದಿ ಮಾಧ್ಯಮದ ಮೂಲಕ ಗ್ರಾಮಸ್ಥರು ಮನವಿ ಮಾಡಿದರು.

ಸಂತೋಷ, ಚನ್ನಬಸಪ್ಪ, ರಾಘವೇಂದ್ರ, ರಾಘು, ಬೊಮ್ಮಾ, ಸಚಿನ್, ಕರಿಯಪ್ಪ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯ ಸ್ಮರಣೆ



ದಾವಣಗೆರೆ, ಜ.30- ನಗರದ ಪಿ.ಬಿ.ರಸ್ತೆಯಲ್ಲಿರುವ ಶ್ರೀ ಉಮಾ ಮಹೇಶ್ವರ ದೇವಸ್ಥಾನದಲ್ಲಿ ಲಿಂ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯ ಸ್ಮರಣೋತ್ಸವ ಸಮಾರಂಭವು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಾಜಿ ಮಹಾಪೌರ ಬಿ.ಜಿ. ಅಜಯಕುಮಾರ್ ಉದ್ಘಾಟಿಸಿದರು. ಉದಯ ಶಂಕರ ಶಾಸ್ತ್ರಿಗಳು ಸ್ವಾಗತಿಸಿದರು. ಆವರಗೊಳ್ಳ ಶ್ರೀಗಳು ಮಹಾತಪಸ್ವಿ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಜೀವನ ದರ್ಶನವನ್ನು ಮಾಡಿಕೊಟ್ಟರು. ಇದೇ ಸಂದರ್ಭದಲ್ಲಿ ಸಿದ್ದಗಂಗಾ ಕ್ಷೇತ್ರದ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಸ್ಮರಣೋತ್ಸವವನ್ನೂ ಆಚರಿಸಲಾಯಿತು.

ದೇವಸ್ಥಾನದ ಅಧ್ಯಕ್ಷ ಎ.ಎಸ್.ಜಯಣ್ಣ, ಸಮಿತಿಯ ಎ.ಎಸ್. ಮೃತ್ಯುಂಜಯ, ರಾಜಣ್ಣ ಬಸಾಪುರ, ಮಳಲ್ಕೆರೆ ಶಿವಮೂರ್ತಿ, ರಾಜಶೇಖರ್, ಹೆಚ್.ವಿ.ವೀರಭದ್ರಪ್ಪ, ಪಿಸಾಳೆ ನಾಗಣ್ಣ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ಸಂಗೊಳ್ಳಿ ರಾಯಣ್ಣ ಪುತ್ಥಳಿಯ ಎತ್ತರ ಹೆಚ್ಚಿಸಲು ನಿರ್ಧಾರ



ದಾವಣಗೆರೆ, ಜ.30- ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿರುವ ರಾಯಣ್ಣ ಪುತ್ಥಳಿಯ ಎತ್ತರವನ್ನು ಹೆಚ್ಚಿಸಿ ಹೊಸ ಪುತ್ಥಳಿ ಅನಾವರಣ ಮಾಡಬೇಕು ಎಂಬುದರ ಕುರಿತು ಸಭೆ ನಡೆಸಲಾಯಿತು.

ನಗರದ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿ.ಪಂ ಮಾಜಿ ಸದಸ್ಯ ಹದಡಿ ನಿಂಗಪ್ಪ ನೇತೃತ್ವದಲ್ಲಿ ಸಭೆ ನಡೆಯಿತು. ಪಿ.ಬಿ ರಸ್ತೆ ಸೇರಿದಂತೆ ಫ್ಲೈ ಓವರ್ ನಿರ್ಮಾಣ ಆಗಿದ್ದು, ಈ ಹಿನ್ನೆಲೆಯಲ್ಲಿ ಮೂರ್ತಿ ಚಿಕ್ಕದಾಗಿ ಕಾಣುತ್ತಿದೆ. ಸುಮಾರು 12 ರಿಂದ 21 ಅಡಿ ಎತ್ತರದವರೆಗೆ ರಾಯಣ್ಣ ಪುತ್ಥಳಿ ನಿರ್ಮಾಣ ಮಾಡುವಂತೆ ಒಕ್ಕೊರಲಿನ ಆಗ್ರಹ ಕೇಳಿ ಬಂತು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಇಟ್ಟಿಗುಡಿ ಮಂಜುನಾಥ್, ಮುಖಂಡರಾದ ಗೌಡ್ರು ಚನ್ನಬಸಪ್ಪ, ಶಿವಣ್ಣ ಮೇಷ್ಟ್ರು, ರಾಜು ಮೌರ್ಯ, ಶಿವಾನಂದ ದಳವಾಯಿ, ಬಿ.ಬಿ.ಮಲ್ಲೇಶ್, ಮಧು ನಾಗರಾಜ್ ಕುಂದುವಾಡ, ಲಿಂಗರಾಜ್, ಪರುಶುರಾಮ್, ಡಿ.ಕೆ.ರಮೇಶ್, ರಾಜೇಶ್, ಪ್ರಸನ್ನ ಬೆಳಕೇರಿ ಸೇರಿದಂತೆ ಸಮಾಜ ಬಾಂಧವರು ಇದ್ದರು.

### ಓದುಗರ ಪತ್ರ

## ವಾಯು ಮಾಲಿನ್ಯ ತಪ್ಪಿಸಿರಿ..!



**ಮಾನ್ಯರೇ,**

ನಗರದ ಪಿ.ಬಿ.ರಸ್ತೆ, ಸಂಗೊಳ್ಳಿ ರಾಯಣ್ಣ ಮೇಲು ಸೇತುವೆ ಬಳಿ ವಾಣಿಜ್ಯ ತೆರಿಗೆ ಇಲಾಖೆ, ದೂಡಾ ಕಛೇರಿ ಮತ್ತು ಕೇಂದ್ರ ಸಹಕಾರ ಬ್ಯಾಂಕು ಸಾಲಾಗಿ ಬರುತ್ತವೆ.

ಕಛೇರಿ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಚರಂಡಿಗೆ ಕಚೇರಿ ಪೇಪರ್, ಕಸ-ಕಡ್ಡಿ ಇತ್ಯಾದಿ ತ್ಯಾಜ್ಯವನ್ನು ಹಾಕಿ, ಬೆಂಕಿ ಹಚ್ಚಲಾಗುತ್ತಿದೆ. ಇದರಿಂದ ವಾಯ ಮಾಲಿನ್ಯ ಉಂಟಾಗಿ ಅಲ್ಲಿ ಪ್ರತಿನಿತ್ಯ ವಾಕ್ ಮಾಡುವ ಜನರಿಗೆ, ಅದರಲ್ಲೂ ಹಿರಿಯ ನಾಗರಿಕರಿಗೆ ತೊಂದರೆ ಉಂಟಾಗುತ್ತಿದೆ.

ಜೊತೆಗೆ ಬಣ್ಣ ಹಚ್ಚಿದ ಕಾಂಪೌಂಡ್ ಗೋಡೆಗಳೂ ಹಾಳಾಗುತ್ತವೆ. ಸಂಬಂಧಪಟ್ಟವರು ಗಮನಹರಿಸಲಿ.

**- ಕೆ.ಜಿ.ಬಸವರಾಜಪ್ಪ, ಜಿಲ್ಲಾ ಟ್ರಜರಿ ನಿವೃತ್ತ ಅಧಿಕಾರಿ.**

# ಸ್ವತಂತ್ರ ನಿರ್ಧಾರವಿಲ್ಲದೆ ಅಭಿವೃದ್ಧಿ ಅಸಾಧ್ಯ

## ಅಮೃತ ಮಹೋತ್ಸವದ ವಿಶೇಷ ಉಪನ್ಯಾಸದಲ್ಲಿ ಎಚ್. ಬಿ. ಮಂಜುನಾಥ



ದಾವಣಗೆರೆ,ಜ.30- ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು ಆಗದ ಯಾವುದೇ ದೇಶವಾಗಲೀ, ಸಮಾಜವಾಗಲೀ, ವ್ಯಕ್ತಿಯಾಗಲೀ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂದು ಹಿರಿಯ ಪತ್ರಿಕಾ ವ್ಯಂಗ್ಯಚಿತ್ರಕಾರ ಎಚ್. ಬಿ. ಮಂಜುನಾಥ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಸಂಯುಕ್ತಾಶ್ರಯದಲ್ಲಿ 'ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ' ಮತ್ತು 'ರಾಷ್ಟ್ರೀಯ ಪ್ರವಾಸೋದ್ಯಮ ದಿನ' ದ ಅಂಗವಾಗಿ ಏರ್ಪಾಡಾಗಿದ್ದ ವಿಚಾರ ಸಂಕಿರಣದಲ್ಲಿ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇವನಗರಿ ಕೊಡುಗೆ" ಎಂಬ ವಿಷಯವಾಗಿ ಅವರು ಉಪನ್ಯಾಸ ನೀಡಿದರು.

ಬ್ರಿಟಿಷರ ಆಳ್ವಿಕೆ ಸಂದರ್ಭದಲ್ಲಿ ಇದ್ದ ಭಾರತದ ಸ್ಥಿತಿ ಯನ್ನು ನಿವಾರಿಸಿದ ಕೀರ್ತಿ ನಮ್ಮ ಸ್ವಾತಂತ್ರ್ಯ ಸೇನಾನಿಗಳಿಗೆ ಸಲ್ಲುತ್ತದೆ, ಅವರ ತ್ಯಾಗ, ಹೋರಾಟ, ಬಲಿದಾನಗಳನ್ನು ಸ್ಮರಿಸಿಕೊಳ್ಳುತ್ತಾ ಪರತಂತ್ರದ ಸ್ಥಿತಿಯನ್ನು ಕೇಳಿ ತಿಳಿದಾಗ ಸ್ವಾತಂತ್ರ್ಯದ ಮಹತ್ವ ಏನೆಂಬುದು ಹಾಗೂ ಅದರ ಮೌಲ್ಯಗಳ ಅರಿವು ನಮಗಾಗುತ್ತದೆ ಎಂದರು.

ದಾವಣಗೆರೆಯಲ್ಲಿ ಸ್ವಾತಂತ್ರ್ಯ ಹೋರಾಟವು 1920 ರ ಸ್ವದೇಶಿ ಚಳುವಳಿಯಿಂದ ಆರಂಭಗೊಂಡು 1942 ರ ವೇಳೆಗೆ ತಾರಕಕ್ಕೇರಿ 1947ರ ವರೆಗೆ ನಡೆದ ಹೋರಾಟ ಬಲಿದಾನಗಳ ನಿದರ್ಶನಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿ ಅಂಥವರ ಪಾತ್ರ ಎಷ್ಟಿದೆಯೋ, ಅಷ್ಟೇ ನೇತಾಜಿ ಸುಭಾಷ್ ಚಂದ್ರ ಬೋಸ್ ರಂಥವರ ಪಾತ್ರವೂ ಮಹತ್ವದ್ದಾಗಿದೆ ಎಂದು ಮಂಜುನಾಥ್ ವಿವರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರ ಮಲ್ಲಪ್ಪ, ಪ್ರವಾಸೋದ್ಯಮ ಬೆಳೆದರೆ ಆರ್ಥಿಕ ಚಟುವಟಿಕೆಯೂ ಬೆಳೆಯುತ್ತದೆ ಎಂದರು. ಪ್ರವಾಸೋದ್ಯಮ ಇಲಾಖೆಯ ಸ್ಥಳೀಯ ಸಹಾಯಕ ನಿರ್ದೇಶಕ ಪಾಲಾಕ್ಷ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಕುಸಗಟ್ಟಿ ವಹಿಸಿದ್ದರು. ಅಧ್ಯಾಪಕಿ ಅನ್ನಪೂರ್ಣ ನಿರೂಪಿಸಿದ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಸೇನಾನಿ ಬಳ್ಳಾರಿ ಸಿದ್ದಮ್ಮ ನವರ ಮೊಮ್ಮಗ ಚಿತ್ರಿಕಿ ಶಿವಕುಮಾರ್ ವಚನ ಪ್ರಾರ್ಥನೆ ಹಾಡಿದರು. ಅಧ್ಯಾಪಕ ಮಂಜಪ್ಪ ಸ್ವಾಗತ ಕೋರಿದರು. ಅಧ್ಯಾಪಕಿ ಸೈದಾ ಮತದಾನದ ಪ್ರಮಾಣ ವಚನ ಬೋಧಿಸಿದರು.

ವೇದಿಕೆಯಲ್ಲಿ ಮುನ್ಸಿಪಲ್ ಜ್ಯೂನಿಯರ್ ಕಾಲೇಜಿನ ಪ್ರಾಚಾರ್ಯ ಸುರೇಶ್, ಹರಿಹರದ ರಾಜಶೇಖರಪ್ಪ ಮುಂತಾದವರು ಉಪಸ್ಥಿತರಿದ್ದರು.

# ಮಲೇಬೆನ್ನೂರು : ಸಂಭ್ರಮದ ಗಣರಾಜ್ಯೋತ್ಸವ






ಮಲೇಬೆನ್ನೂರು, ಜ. 30- ಪಟ್ಟಣದ ವಿವಿಧೆಡೆ 73ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಇಲ್ಲಿನ ಪುರಸಭೆ ಕಛೇರಿ ಮುಂಭಾಗ ಮತ್ತು ಮುಖ್ಯ ವೃತ್ತದಲ್ಲಿ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಧ್ವಜಾರೋಹಣ ನೆರವೇರಿಸಿ ವಂದನೆ ಸ್ವೀಕರಿಸಿದರು.

ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಮಜೀದ್ ಖಾನ್, ಭೋವಿ ಶಿವು, ಸಾಬೀರ್ ಅಲಿ, ಬೆಣ್ಣೆಹಳ್ಳಿ ಸಿದ್ದೇಶ್, ಮಹ್ಮದ್ ಖಲೀಲ್, ನಯಾಜ್, ದಾದಾಪೀರ್, ಚಮನ್ ಷಾ, ಶ್ರೀಮತಿ ವಿಜಯಲಕ್ಷ್ಮಿ ಕೆ.ಪಿ. ಗಂಗಾಧರ್, ಶಬ್ಬೀರ್ ಖಾನ್, ಶ್ರೀಮತಿ ಸುಧಾ ಪಿ.ಆರ್. ರಾಜು, ಶ್ರೀಮತಿ ಅಕ್ಕಮ್ಮ ಬಿ. ಸುರೇಶ್, ಓ.ಜಿ. ಕುಮಾರ್, ಭೋವಿಕುಮಾರ್, ಯೂಸೂಫ್ ಖಾನ್, ಪಿ.ಆರ್. ರಾಜು, ಎ.ಕೆ. ಲಂಕೇಶ್ ಮತ್ತು ಪುರಸಭೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಜರಿದ್ದರು.

ನಾಡ ಕಛೇರಿಯಲ್ಲಿ ಉಪ ತಹಶೀಲ್ದಾರ್ ಆರ್. ರವಿ ಧ್ವಜಾರೋಹಣ ಮಾಡಿ ವಂದನೆ ಸ್ವೀಕರಿಸಿದರು.

ಕಂದಾಯ ನಿರೀಕ್ಷಕ ಸಮೀರ್, ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಸುಭಾನಿ, ಅಣ್ಣಪ್ಪ, ಶ್ರೀಮತಿ ಮಂಜುಳಾ, ಸೌಮ್ಯ, ದೊಡ್ಡ ಬಸವರಾಜ್, ಶ್ರೀಧರ್, ಶಿವಕುಮಾರ್, ಗ್ರಾಮ ಸಹಾಯಕರಾದ ಅಂಜಿನಪ್ಪ, ರಾಜಪ್ಪ, ಸಂತೋಷ್, ಮಾರುತಿ, ಚನ್ನಪ್ಪ, ಮಂಜಮ್ಮ, ಜಿಗಳಿ ರಂಗನಾಥ್ ಮತ್ತಿತರರು ಭಾಗವಹಿಸಿದ್ದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಂಘದ ಅಧ್ಯಕ್ಷ ಪಿ.ಆರ್. ಕುಮಾರ್, ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ರವಿಕುಮಾರ್, ಲಯನ್ಸ್ ಶಾಲೆಯಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ರೋಹಿಣಿ ಜಗದೀಶ್ವರ ಸ್ವಾಮಿ, ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ನೀರಾವರಿ ಕಛೇರಿಯಲ್ಲಿ ಕಾರ್ಯಪಾಲಕ ಇಂಜಿನಿಯರ್ ಚಿದಂಬರ್ ಲಾಲ್, ಎಇಇ ಸಂತೋಷ್, ಎಸ್‌ಬಿಕೆಎಂ ಶಾಲೆಯ ಅಧ್ಯಕ್ಷ ಡಾ. ವಿಜಯ ರಾಘವ್ ಮಾಲತೇಶ್ ಪಬ್ಲಿಕ್ ಸ್ಕೂಲ್‌ನಲ್ಲಿ ಕಾರ್ಯದರ್ಶಿ ಮಾಲತೇಶ್, ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಅಬುಸಾಲೇಹ ಅವರು ಧ್ವಜಾರೋಹಣ ನೆರವೇರಿಸಿದರು.

## ಹೆಗಡೆ ನಗರ, ಚಂದ್ರೋದಯ ನಗರ ನಿವಾಸಿಗಳಿಗೆ ಸೌಲಭ್ಯ ಕಲ್ಪಿಸಿ

ದಾವಣಗೆರೆ, ಜ.30- ಕಳೆದ 40 ವರ್ಷಗಳಿಂದ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರವ ಹೆಗಡೆನಗರ ಹಾಗೂ ಚಂದ್ರೋದಯ ನಗರದ ನಿವಾಸಿಗಳಿಗೆ ಶಾಶ್ವತ ಸೂರು, ಜೊತೆಗೆ ಮೂಲಭೂತ ಸೌಲಭ್ಯ ಕಲ್ಪಿಸಿಕೊಡದಿದ್ದರೆ ವಾರದೊಳಗೆ ಉಗ್ರ ಹೋರಾಟ ನಡೆಸುವುದಾಗಿ ನಾಗರಿಕ ಮೂಲ ಸೌಕರ್ಯ ಹೋರಾಟ ವೇದಿಕೆ ಜಿಲ್ಲಾ ಸಂಚಾಲಕ ಜೆ. ಅಮಾನುಲ್ಲಾಖಾನ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದಲ್ಲಿ ತ್ವರಿತಗತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದು ಸಂತೋಷದ ವಿಚಾರ. ಆದರೆ, ಮೂಲ ಸೌಲಭ್ಯಗಳಿಂದ ವಂಚಿತವಾದ ಹೆಗಡೆ ನಗರ, ಚಂದ್ರೋದಯ ನಗರದ ರಿಂಗ್‌ರಸ್ತೆ ನಿವಾಸಿಗಳಿಗೆ ಶಾಶ್ವತ ಸೂರು ಕಲ್ಪಿಸಿ, ನೆಮ್ಮದಿ ಜೀವನಕ್ಕೆ ದಾರಿ ಮಾಡಿಕೊಡಬೇಕಾದ ಅಗತ್ಯವಿದೆ ಎಂದರು. 395 ಕ್ಕೂ ಅಧಿಕ ಕುಟುಂಬಗಳು ಇಲ್ಲಿ ವಾಸಿಸುತ್ತಿದ್ದು, ಮೂಲ ಸೌಕರ್ಯಗಳಿಲ್ಲದೇ ಪ್ರಾಣಿಗಳಂತೆ ಬದುಕು ನಡೆಸುತ್ತಿದ್ದಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಟಿ. ಅಸ್ಗರ್, ಯು.ಎಂ. ಮನ್ಸೂರ್ ಅಲಿ, ಸಲೀಂ ಸಾಬ್, ಬಷೀರ್ ಅಹ್ಮದ್, ಖಾಸರ್ ಬಾಷಾ, ಇಬ್ರಾಹಿಂ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಎಂ.ಸಿ.ಸಿ.'ಎ' ಮತ್ತು 'ಬಿ' ಬ್ಲಾಕ್ ಕಲಾಕುಂಚ ಶಾಖೆ ಉದ್ಘಾಟನೆ



ದಾವಣಗೆರೆ, ಜ. 30- ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಗುರುಗಳಿಗೆ, ಹಿರಿಯರಿಗೆ ಗೌರವ ಕೊಡುವ ಶಿಷ್ಟಾಚಾರಗಳು ಮರೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ಆವರಗೊಳ್ಳದ ಶ್ರೀ ಕ್ಷೇತ್ರ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಎಂ.ಸಿ.ಸಿ.'ಎ' ಬ್ಲಾಕ್‌ನ ಸಭಾಂಗಣದಲ್ಲಿ ಎಂ.ಸಿ.ಸಿ.'ಎ' ಮತ್ತು 'ಬಿ' ಬ್ಲಾಕ್ ಕಲಾಕುಂಚ ಶಾಖೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು,ಕೆಲವು ಪೋಷಕರು ಮಕ್ಕಳ ಮೇಲಿನ ಅತಿಯಾದ ಪ್ರೀತಿಯ ಮೇರೆ ಮೀರಿದ ಭರವಸೆಯ ಪ್ರತಿಕವೇ ಅವರ ಮೌಲ್ಯಗಳಿಗೆ ಧಕ್ಕೆಯಾಗುತ್ತಿರುವುದು ನಗ್ನ ಸತ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಮಾತನಾಡಿದರು.

ಸುಜಯ್ ವಿನೋದ್ ದೇವರಾಜ್ ಪ್ರಾರ್ಥಿಸಿದರು. ಸಂಸ್ಥೆಯ ಗೌರವಾಧ್ಯಕ್ಷರಾದ ಶ್ರೀಮತಿ ಚಂದ್ರಶೇಖರ ಅಡಿಗ ಸ್ವಾಗತಿಸಿದರು.

ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶೈಲಾ ವಿನೋದ್ ದೇವರಾಜ್ ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್ ಶೆಣೈ, ಖಜಾಂಚಿ ಗೀತಾ ಬದರಿನಾಥ್, ವಿವಿಧ ಶಾಖೆಗಳ ಅಧ್ಯಕ್ಷರುಗಳಾದ ಶ್ರೀಮತಿ ಶಾರದಮ್ಮ ಶಿವನಪ್ಪ, ಶ್ರೀಮತಿ ಸುಜಾತ ಬಸವರಾಜ್, ಶ್ರೀಮತಿ ಲಲಿತಾ ಕಲ್ಲೇಶ್, ಪದಾಧಿಕಾರಿಗಳಾದ ಶ್ರೀಮತಿ ಕುಸುಮಾ ಲೋಕೇಶ್, ಶೈಲಾ ವಿಜಯಕುಮಾರ್ ಉಪಸ್ಥಿತರಿದ್ದರು.

## ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾ ಸಮಿತಿ ರಚನೆ



ದಾವಣಗೆರೆ, ಜ. 30- ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪನವರ ಶಿಫಾರಸ್ಸಿನಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅನುಮೋದನೆ ಮೇರೆಗೆ ರಾಜ್ಯ ಸಾಮಾಜಿಕ ಜಾಲತಾಣದ ಅಧ್ಯಕ್ಷ ಬಿ.ಆರ್. ನಾಯ್ಡು ಅವರು ಜಿಲ್ಲಾ ಸಾಮಾಜಿಕ ಜಾಲತಾಣದ ಸಮಿತಿ ಆಯ್ಕೆ ಮಾಡಿರುತ್ತಾರೆ ಎಂದು ಜಿಲ್ಲಾಧ್ಯಕ್ಷ ಕೆ.ಎಲ್. ಹರೀಶ್ ಬಸಾಪುರ ತಿಳಿಸಿದ್ದಾರೆ.


ಉಪಾಧ್ಯಕ್ಷರಾಗಿ ಹನುಮಂತು, ಬಿ.ಎನ್. ರಂಗನಾಥಸ್ವಾಮಿ, ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿಧಾನಸಭಾ ಉಸ್ತುವಾರಿಗಳು ರಾಜು ಸಾದತ್, ಸುನೀಲ್ (ಜಗಳೂರು), ಬೊಮ್ಮಲಿಂಗಪ್ಪ (ಚನ್ನಗಿರಿ), ಬಸವರಾಜ್ ಮಾಳಗಿ (ಹರಿಹರ), ಮೊಹಮ್ಮದ್ ಜಿಕ್ರಿಯಾ (ದಾವಣಗೆರೆ ದಕ್ಷಿಣ), ರುದ್ರಮುನಿ (ಮಾಯಕೊಂಡ), ಅರುಣ್ ಡಿ ಇ (ದಾವಣಗೆರೆ ಉತ್ತರ) ಆಸಿಫ್ (ಹೊನ್ನಾಳಿ), ಕಾರ್ಯದರ್ಶಿಗಳು ಹಾಗೂ ಬ್ಲಾಕ್ ಉಸ್ತುವಾರಿ ನಿರಂಜನ್ ಎಚ್.ಎಸ್. (ಜಗಳೂರು), ಮಲ್ಲಿಕಾರ್ಜುನ್ ವಂದಾಲಿ (ಬಿಳಿಚೋಡು ಅರಸೀಕೆರೆ), ಅವಿನಾಶ್ ಬಂದೊಳ್ (ಚನ್ನಗಿರಿ), ಬಾಬಜಾನ್ (ಸಂತೆಬೆನ್ನೂರು), ಗುರು ಪಾಟೀಲ್ (ಹರಿಹರ), ದರ್ಶನ್ ಕಂಸಾಗರ (ಮಲೇಬೆನ್ನೂರು), ವೀರಭದ್ರಪ್ಪ (ದಾವಣಗೆರೆ ದಕ್ಷಿಣ ಗ್ರಾಮಾಂತರ), ರೆಹಮತ್ (ದಾವಣಗೆರೆ ದಕ್ಷಿಣ ನಗರ), ಪರಶುರಾಮ್ ಕೆ.ಟಿ (ಮಾಯಕೊಂಡ), ಹಾಲೇಶ್ ಅರ್ (ಬಸವಾಪಟ್ಟಣ), ಹರೀಶ್ ಎನ್. (ದಾವಣಗೆರೆ ಉತ್ತರ ಗ್ರಾಮಾಂತರ), ಕೆ.ಸಿ. ರೋಹಿತ್ (ದಾವಣಗೆರೆ ಉತ್ತರ ನಗರ), ನಾಗರಾಜ್ ಬಿ (ಹೊನ್ನಾಳಿ), ತುಷಾರ್ ಗೌಡ (ನ್ಯಾಮತಿ) ಆಯ್ಕೆಯಾಗಿರುತ್ತಾರೆ.

## ವಚನ ಹಾಡಿದ ಚಿತ್ರಿಕಿ ಶಿವಕುಮಾರ್



ದಾವಣಗೆರೆ, ಜ. 30- ನಗರದ ಎಸ್.ಆರ್.ಪಿ. ಸಮೂಹ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ನಡೆದ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಚಿತ್ರಿಕಿ ಶಿವಕುಮಾರ್ ಅವರು ಶಿವಯೋಗಿ ಸಿದ್ಧರಾಮೇಶ್ವರರ ವಚನ ಹಾಡಿದರು.

## ಸಾಗರ್ ಜಾಧವ್ ಜರೇಕಟ್ಟೆಗೆ ಪಿಹೆಚ್‌ಡಿ



ದಾವಣಗೆರೆ, ಜ.30- ಜರೇಕಟ್ಟೆ ಗ್ರಾಮದ ಸಮಾಜ ಸೇವಕ ಪಿ.ಬಿ.ಸಾಗರ್ ಜಾಧವ್ ಜರೇಕಟ್ಟೆ ಅವರಿಗೆ ಚೆನ್ನೈನಲ್ಲಿರುವ ಗ್ಲೋಬಲ್ ಅಚೀವರ್ಸ್ ಕೌನ್ಸಿಲ್ ಚೆನ್ನೈ ವಿಶ್ವವಿದ್ಯಾನಿಲಯದ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ, ಗೌರವಿಸಿದೆ.

## ಎಐಡಿಎಸ್‌ಓದಿಂದ ನೇತಾಜಿ ಜನ್ಮದಿನ




ದಾವಣಗೆರೆ, ಜ.30- ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಓ) ವತಿಯಿಂದ ಜಿಲ್ಲೆಯ ವಿವಿಧ ಶಾಲಾ-ಕಾಲೇಜು ಮತ್ತು ಹಾಸ್ಟೆಲ್‌ಗಳಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸುವ ಮೂಲಕ 125ನೇ ಜನ್ಮದಿನವನ್ನು ಆಚರಿಸಲಾಯಿತು.

# ಬಸವಣ್ಣನವರ ಸಮಾನತೆಯ ಕಲ್ಯಾಣ ರಾಜ್ಯ ಕಟ್ಟಲು ಸಂಕಲ್ಪ



ಹರಿಹರ, ಜ.30- ಪ್ರಬುದ್ಧ ಹಾಗೂ ಜಾತ್ಯತೀತ ಭಾರತ ಮತ್ತು ಬಸವಣ್ಣನವರ ಸಮಾನತೆಯ ಕಲ್ಯಾಣ ರಾಜ್ಯ ಕಟ್ಟುವುದಕ್ಕಾಗಿ ಸಂಕಲ್ಪ ಮಾಡೋಣ ಎಂದು ಮಾನವ ಬಂಧುತ್ವ ವೇದಿಕೆಯ ಸಂಸ್ಥಾಪಕರೂ, ಕೆಪಿಸಿಸಿ ಕಾರ್ಯಾಧ್ಯಕ್ಷ ಆದ ಶಾಸಕ ಸತೀಶ್ ಜಾರಕಿಹೊಳಿ ಪ್ರಬುದ್ಧ ಮನಸುಗಳಿಗೆ ಕರೆ ನೀಡಿದರು.

ಇಲ್ಲಿನ ಬೈಪಾಸ್ ಬಳಿ ಇರುವ ಪ್ರೊ. ಬಿ. ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಮಾನವ ಬಂಧುತ್ವ ವೇದಿಕೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ಎರಡು ದಿನಗಳ ಬಂಧುತ್ವ ಬಲಪಡಿಸುವ ವಿಭಾಗೀಯ ಸಂಘಟನಾ ಸಮಾವೇಶದ ಸಮಾರೋಪ ಸಮಾರಂಭ ದಲ್ಲಿ ಪಾಲ್ಗೊಂಡು ಮಾತನಾಡಿದರು.

ಬುದ್ಧ, ಬಸವ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವ ನಮ್ಮ ವೇದಿಕೆಯಿಂದ ಪ್ರಾರಂಭಿಕವಾಗಿ ಮೌಢ್ಯತೆಯಿಂದ ಜನರನ್ನು ಹೊರತರುವ ಕೆಲಸ ಮಾಡಿ ಅದರ ಫಲಿತಾಂಶವನ್ನೂ ಕಂಡಿದ್ದೇವೆ.

ಇತಿಹಾಸವನ್ನು ಮರೆಮಾಚುವ ಕೆಲಸ ದೇಶವನ್ನು ಲೀಡ್ ಮಾಡುತ್ತಿರುವ ವ್ಯಕ್ತಿಯಿಂದ ನಡೆಯುತ್ತಿದೆ. ಮಹಾನ್ ಪುರುಷರ ತತ್ವ, ಆದರ್ಶ ಹಾಗೂ ಹೋರಾಟಗಳನ್ನು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸುವುದಕ್ಕಾಗಿ ಹೊಸ ನಾಯಕರನ್ನು ನಾವೆಲ್ಲರೂ ತಯಾರು ಮಾಡಬೇಕಿದೆ.

ಮಂತ್ರಿ, ಶಾಸಕ, ಸಂಸದ ಹಾಗೂ ಅಧಿಕಾರಿ ಆಗಿದ್ದರೆ ಮತ್ತು ಆಸ್ತಿ-ಅಂತಸ್ತು, ಕೈಗಾರಿಕೆ ಹೊಂದಿದ್ದರೆ ಅದು ಅಂಬೇಡ್ಕರ್ ನೀಡಿದ ಸಂವಿಧಾನದಿಂದಲೇ ಎಂಬುದನ್ನು ಯಾರೂ ಮರೆಯಬಾರದು. ಅಂತಹ ಪವಿತ್ರ ಸಂವಿಧಾನದ ರಕ್ಷಣೆ ಮಾಡುವ ಜವಾಬ್ದಾರಿ ಕೇವಲ ಒಂದೇ ವರ್ಗದ ಮೇಲಿಲ್ಲ, ಆ ಜವಾಬ್ದಾರಿಯನ್ನು ಎಲ್ಲಾ ವರ್ಗಗಳ ಶೋಷಿತರು, ಹಿಂದುಳಿದವರು ತೆಗೆದುಕೊಳ್ಳಬೇಕೆಂದು ಸತೀಶ್ ಜಾರಕಿಹೊಳಿ ಕಿವಿಮಾತು ಹೇಳಿದರು.

7 ವರ್ಷಗಳಿಂದ ದೇಶದಲ್ಲಿ ಜಾರಿಗೆ ತಂದ ಹೊಸ ಕಾನೂನುಗಳಿಂದ ಸಾಮಾನ್ಯ ಜನರಿಗೆ ತೊಂದರೆ ಆಗಿದೆ, ಜೊತೆಗೆ ಹೊಸ ಶಿಕ್ಷಣ ಹೇಗಿದೆ ಎಂದರೆ ಗುಳಿಗೆಗೆ ಸಕ್ಕರೆ ಪಾಕ ಹಾಕಿ ತಿನ್ನಿಸುವ ಹಾಗಿದೆ ಎಂದು ದೂರಿದ ಅವರು, ಇಂತಹ ಹೊಸ ಸವಾಲುಗಳನ್ನು ಎದುರಿಸಲು ಜನರು ಜಾಗೃತರಾಗಬೇಕು ಎಂದು ಕರೆ ನೀಡಿದರು.


ಈ ಸಂದರ್ಭದಲ್ಲಿ ಉಕ್ಕಡಗಾತ್ರಿಯ ದೊಡ್ಮನಿ ಅವರ 'ಉಕ್ಕಡಗಾತ್ರಿ ಕರಿಬಸಜ್ಜನ ದೆವ್ವಗಳ ಜಾನಪದಿಯ ಅಧ್ಯಯನ' ಪುಸ್ತಕವನ್ನು ಸತೀಶ್ ಜಾರಕಿಹೊಳಿ ಬಿಡುಗಡೆ ಮಾಡಿದರು.

ವೇದಿಕೆಯ ವಿಭಾಗೀಯ ಸಂಚಾಲಕ ಆರ್. ಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಇನ್ನೋರ್ವ ವಿಭಾಗೀಯ ಸಂಚಾಲಕ ಅನಂತನಾಯ್ಕ, ಪ್ರೊ. ಬಿ. ಕೃಷ್ಣಪ್ಪ ಭವನ ಟ್ರಸ್ಟಿ ಹನಗವಾಡಿ ರುದ್ರಪ್ಪ, ಹರಿಹರದ ಪಾರ್ವತಿ, ದಾವಣಗೆರೆಯ ಹನುಮಂತಪ್ಪ ಮತ್ತು ಇತರರು ಮಾತನಾಡಿದರು.

ಶಾಸಕ ಎಸ್. ರಾಮಪ್ಪ, ಪ್ರಗತಿಪರ ಚಿಂತಕರಾದ ತೇಜಸ್ವಿ ಪಟೇಲ್, ಪ್ರೊ. ಎ.ಬಿ. ರಾಮಚಂದ್ರಪ್ಪ, ಹೆಚ್.ಕೆ. ಕೊಟ್ರಪ್ಪ, ಆವರಗೆರೆ ರುದ್ರಮುನಿ, ಎಂ.ಟಿ. ಸುಭಾಷ್‌ಚಂದ್ರ, ಮುಖಂಡರಾದ ಹೊದಿಗೆರೆ ರಮೇಶ್, ಕೆ.ಪಿ. ಪಾಲಯ್ಯ, ಬಿ. ವೀರಣ್ಣ, ಎಸ್.ಕೆ. ಬಸವಂತಪ್ಪ, ಅಯೂಬ್ ಖಾನ್, ಸೈಯದ್ ಎಜಾಜ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬಿದ್ ಅಲಿ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿಟ್ಟೂರು ಸಂಜೀವಮೂರ್ತಿ, ಸಮಾಜಸೇವಕ ನಂದಿಗಾವಿ ಶ್ರೀನಿವಾಸ್, ಕೆ.ಪಿ. ಗಂಗಾಧರ್, ಎ. ಆರೀಫ್ ಅಲಿ, ಸಾಬೀರ್ ಜಯಸಿಂಹ, ಕುಂಬಳೂರು ವಾಸು, ಶಿಕ್ಷಕ ಜಿ.ಆರ್. ನಾಗರಾಜ್, ರಾಘು ದೊಡ್ಮನಿ, ನಿಟುವಳ್ಳಿ ಕರಿಯಪ್ಪ, ಚನ್ನಗಿರಿ ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್, ಪತ್ರಕರ್ತ ಜಿಗಳಿ ಪ್ರಕಾಶ್, ಡಿ.ವೈ. ಇಂದಿರಾ, ವಿಜಯಶ್ರೀ ಮಹೇಂದ್ರಕುಮಾರ್, ಗೌರಮ್ಮ ಮಂಜುನಾಥ್, ಡಿ.ಎಸ್ 4ರ ಜಿಲ್ಲಾಧ್ಯಕ್ಷ ಸಂತೋಷ್ ನೋಟದವರ, ಸಾರಥಿ ಗ್ರಾ. ಪಂ. ಸದಸ್ಯ ಗೋಣೆಪ್ಪ, ವೇದಿಕೆಯ ಜಿಲ್ಲಾ ಸಂಚಾಲಕ ಮಾಡಾಳ್ ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

> “ಮನುವಾದಿಗಳು ದೇವರ ಹೆಸರಿನಲ್ಲಿ ನಡೆಸುತ್ತಿದ್ದ ಬೆತ್ತಲಸೇವೆ, ದೇವದಾಸಿ ಪದ್ಧತಿಯನ್ನು ಅವರಿಗಾಗಿಯೇ ಮಾಡಿಕೊಂಡಿದ್ದರು. ಅದಕ್ಕೆ ಬಲಿಯಾದವರು ಎಸ್ಸಿ-ಎಸ್ಟಿಗಳೇ ಹೆಚ್ಚು. ಇಂತಹ ಅನಿಷ್ಠ ಆಚರಣೆಗಳ ವಿರುದ್ಧದ ನಮ್ಮ ಹೋರಾಟ ಮುಂದುವರಿಯಲಿದೆ.
>
> -ಸತೀಶ್ ಜಾರಕಿಹೊಳಿ, ಕಾರ್ಯಾಧ್ಯಕ್ಷರು, ಕೆಪಿಸಿಸಿ

## ರಾಣೇಬೆನ್ನೂರು : ಸಿದ್ಧಾರೂಢ ಮಠದಲ್ಲಿ ವೇದಾಂತ ಪರಿಷತ್ ಹಾಗೂ ರಥೋತ್ಸವ



ರಾಣೇಬೆನ್ನೂರು, ಜ. 30 -ಇಲ್ಲಿನ ಶ್ರೀ ಸಿದ್ಧಾರೂಢ ಮಠದಲ್ಲಿ 22 ನೇ ವೇದಾಂತ ಪರಿಷತ್ ಹಾಗೂ 8 ನೇ ಮಹಾರಥೋತ್ಸವ ಫೆಬ್ರವರಿ 3 ರಿಂದ 5 ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ ಎಂದು ಪೀಠಾಧಿಪತಿ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳು ತಿಳಿಸಿದರು.

ದಿ. 3 ರಂದು ಹುಬ್ಬಳ್ಳಿಯ ಶ್ರೀ ಸಚ್ಚಿದಾನಂದ ಸ್ವಾಮೀಜಿ, ದಿ.4 ರಂದು ಹಂಪೆ ಹೇಮಕೂಟದ ಶ್ರೀ ವಿದ್ಯಾನಂದ ಭಾರತಿ ಶ್ರೀ ಗಳು ದಿ. 5 ರಂದು ಹುಬ್ಬಳ್ಳಿಯ ಅಭಿನವ ಸಿದ್ದಾರೂಢ ಮಹಾಸ್ವಾಮಿಗಳು ಪ್ರವಚನ ನೀಡುವರು. ಸಂಜೆ ಎಲ್ಲ ಪೂಜ್ಯರ ಸಾನ್ನಿಧ್ಯದಲ್ಲಿ ಮಹಾರಥೋತ್ಸವ ಜರುಗಲಿದೆ. 3 ದಿನಗಳ ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಮಲ್ಲಯ್ಯಜ್ಜ ವಹಿಸುವರು.

ಸೌಟಗಿ ಲಿಂಗಯ್ಯ ಮಹಾಸ್ವಾಮಿಗಳು, ನೆಲಮಂಗಲದ ಮಾತೋಶ್ರೀ ಉಮಾಭಾರತಿ, ಹುಬ್ಬಳ್ಳಿ ಸಿದ್ಧಾರೂಢ ಮಠದ ಅಧ್ಯಕ್ಷ ಮಟ್ಟಿ ಶೇಖಣ್ಣ, ಬೆಂಗಳೂರಿನ ಬಿ.ಎಂ. ದೇವಯ್ಯ ಪಾಲ್ಗೊಳ್ಳುವರು.

## ಲಸಿಕೆ ಕಡ್ಡಾಯ : ಪ್ರತಿಭಟನೆ

(1ನೇ ಪುಟದಿಂದ) ಕುಟುಂಬದವರು ಮನೆ ತೊರೆದು ಗುಪ್ತ ಸ್ಥಳಕ್ಕೆ ತೆರಳಿದ್ದಾರೆ ಎಂದು ಕೆನಡಾದ ಮಾಧ್ಯಮಗಳು ವರದಿ ಮಾಡಿವೆ.

ಕೆನಡಾದ ಪಶ್ಚಿಮ ಭಾಗದಲ್ಲಿ ಕಳೆದ ವಾರ ಪ್ರತಿಭಟನೆ ಆರಂಭವಾಗಿತ್ತು. ಹತ್ತಾರು ಪ್ರತಿಭಟನಾಕಾರರು ವ್ಯಾಂಕೋವರ್‌ನಿಂದ ಒಟ್ಟಾವಾ ಕಡೆ ಪ್ರತಿಭಟನಾ ಮೆರವಣಿಗೆ ಆರಂಭಿಸಿದ್ದರು.

ಕೆನಡಾ ಹಾಗೂ ಅಮೆರಿಕ ಎರಡು ಜನವರಿ ನಂತರದಿಂದ ಗಡಿಗಳನ್ನು ದಾಟುವ ವಾಹನ ಚಾಲಕರಿಗೆ ಲಸಿಕೆ ಕಡ್ಡಾಯಗೊಳಿಸಿವೆ. ಪ್ರತಿಭಟನೆಯಲ್ಲಿ ಅಂತರ ದೇಶದ ವಾಹನ ಚಾಲಕರು ಪ್ರತಿಭಟನೆಯಲ್ಲಿ ಪಾಲ್ಗೊಂಡ ನಂತರ ಹೋರಾಟ ತೀವ್ರವಾಗಿದೆ.

ಶುಕ್ರವಾರ ಹೇಳಿಕೆ ನೀಡಿದ್ದ ಪ್ರಧಾನಿ ಟ್ರುಡ್ಯೂ, ಪ್ರತಿಭಟನೆ ನಡೆಸುತ್ತಿರುವವರು ವಿಜ್ಞಾನ ವಿರೋಧಿ,ಸರ್ಕಾರ ವಿರೋಧಿ ಹಾಗೂ ಸಮಾಜ ವಿರೋಧಿಗಳು. ಅವರು ತಮಗಷ್ಟೇ ಅಲ್ಲದೇ ಕೆನಡಾದ ಜನರಿಗೂ ಅಪಾಯ ತರುತ್ತಿದ್ದಾರೆ ಎಂದು ಹೇಳಿದ್ದರು.

# ಪೌರ ಕಾರ್ಮಿಕರ ಸೇವೆ ಶ್ಲಾಘನೀಯ



### ಹರಪನಹಳ್ಳಿ : ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ

ಹರಪನಹಳ್ಳಿ, ಜ.30- ಪಟ್ಟಣವನ್ನು ನಿತ್ಯ ಸ್ವಚ್ಛಗೊಳಿಸುವ ಪೌರ ಕಾರ್ಮಿಕ ಕಾರ್ಯ ಶ್ಲಾಘನೀಯವಾಗಿದ್ದು, ಅಂತಹ ಕಾರ್ಮಿಕರನ್ನು ಗೌರವಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ, ಪುರಸಭಾ ಕಾರ್ಯಾಲಯ ಹರಪನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಮತ್ತು ಮಹಾತ್ಮ ಗಾಂಧಿಜೀ ಅವರ ಹುತಾತ್ಮರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಉಭಯ ನ್ಯಾಯಾಲಯದ ನ್ಯಾಯಾಧೀಶರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದ ಬಳಿಕ ಮಾತನಾಡಿದರು.

ದೈಹಿಕವಾಗಿ, ನೈತಿಕವಾಗಿ ಸ್ವಚ್ಛತೆ ಪಡಿಸುವುದಕ್ಕಿಂತ ಮಾನಸಿಕವಾಗಿ ನಾವು ಸ್ವಚ್ಛತೆಯ ಮಾರ್ಗವನ್ನು ಅರಿತು ಕೊಳ್ಳಬೇಕು. ಸ್ವಚ್ಛತೆ ಎನ್ನುವುದು ಗಾಂಧೀಜಿಯವರ ಕನಸು. ಅದನ್ನು ನನಸಾಗಿಸಲು ದೇಶದ ಪ್ರಜೆಗಳು ಕೈ ಜೊಡಿಸಿದಾಗ ಮಾತ್ರ ಇಂತಹ ಯೋಜನೆಗಳನ್ನು ಜಾರಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಕೇಂದ್ರ ಸರಕಾರ ಜಾರಿಗೆ ತಂದಿರುವ ಇಂತಹ ಯೋಜನೆಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ. ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಸಹ, ಇನ್ನೂ ಸರಿಯಾದ ಗಾಳಿ ಮನುಷ್ಯರಿಗೆ ಸಿಗುತ್ತಿಲ್ಲ ಪರಿಸರ ಉಳಿಸಿದರೆ ಮಾತ್ರ ಶುದ್ಧ ಗಾಳಿ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಮಹಾತ್ಮ ಗಾಂಧಿಜೀಯವರು ದೇಶವನ್ನು ರಾಮರಾಜ್ಯವನ್ನಾಗಿ ಮಾಡಬೇಕು ಎನ್ನುವ ಕನಸು ಕಂಡಿದ್ದರು. ಇಂತಹ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವುದರ ಜೊತೆಗೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಗಾಂಧಿಜೀ ಕನಸು ನನಸಾಗುತ್ತದೆ ಎಂದರು.

ಪುರಸಭಾ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್ ಮಾತನಾಡಿ, ಸಾರ್ವಜನಿಕರು ಕೈ ಜೋಡಿಸಿದರೆ ಮಾತ್ರ ಇಂತಹ ಮಹನೀಯರು ಕಂಡ ಕನಸುಗಳನ್ನು ನನಸು ಮಾಡಲು ಸಾಧ್ಯವಾಗುತ್ತದೆ ಎಂದರು.

ಕಿರಿಯ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ, ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ. ವಾಸುದೇವ, ಕಾರ್ಯದರ್ಶಿ ಎಸ್.ಜಿ.ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ನ್ಯಾಯಾಲಯದ ಸಿಬ್ಬಂದಿಗಳಾದ ಮಂಜುನಾಥ್ ಜನವಾಡೆ, ಜಿ.ಎನ್. ಶಿವಾನಂದ, ಉಜ್ವಲ್ ಕುಮಾರ್, ಮುರುಳಿ, ಮೇಘರಾಜ್, ಗುಡೆಕೋಟೆ ನಾಗರಾಜ್, ಕಡಕೋಳದ ರೇವಣಸಿದ್ದಪ್ಪ, ಅರುಣ್ ಕುಮಾರ್, ಬಿ. ಬಸವರಾಜ್, ಕೊಟ್ರೇಶ್ ಮತ್ತಿತರರಿದ್ದರು.

# ನೆಮ್ಮದಿ ಜೀವನಕ್ಕೆ ಕಾಂಗ್ರೆಸ್ ಅನಿವಾರ್ಯ



### ಹರಿಹರದಲ್ಲಿ ಹೆಚ್.ಎ.ಎಂ.ಎಫ್ ಜಿಮ್‌ಗೆ ಚಾಲನೆ ನೀಡಿದ ಶಾಸಕ ರಾಮಪ್ಪ

ಹರಿಹರ, ಜ.30- ಸಾರ್ವಜನಿಕರು ಪ್ರೀತಿ, ವಿಶ್ವಾಸ, ನೆಮ್ಮದಿ ಜೀವನ ನಡೆಸಲು ಮುಂದಿನ ದಿನಗಳಲ್ಲಿ ರಾಜ್ಯ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತ ಅನಿವಾರ್ಯವಾಗಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಹಳ್ಳದಕೇರಿ ಇಮಾಮ್ ಮೋಹಲ್ಲಾ ಬಡಾವಣೆಯಲ್ಲಿ ನಗರಸಭೆಯ ಸದಸ್ಯ ಶಂಕರ್ ಖಟಾವ್ಕಾರ್ ಅವರ ನಗರಸಭೆ ಅನುದಾನದಲ್ಲಿ ನವೀಕರಣಗೊಂಡ 8 ಲಕ್ಷ ರೂ. ವೆಚ್ಚದ ಹೆಚ್.ಎ.ಎಂ.ಎಫ್ ಜಿಮ್‌ಗೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯ ಮತ್ತು ಕೇಂದ್ರದಲ್ಲಿನ ಬಿಜೆಪಿ ಸರ್ಕಾರದಲ್ಲಿ ಆಗುತ್ತಿರುವ ಬೆಲೆ ಏರಿಕೆ ನೋಡಿದರೆ ಸಾರ್ವಜನಿಕರು ಬಂಡವಾಳ ಶಾಹಿಗಳ ಬಳಿ ಕೈ ಕಟ್ಟಿ ಕುಳಿತುಕೊಳ್ಳು ವಂತಹ ದಿನಗಳು ಮರುಕಳಿಸುವ ಕಾಲ ದೂರದಲ್ಲಿಲ್ಲ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ಸಲಕರಣೆಗೆ 5 ಲಕ್ಷ ರೂ. ಅನುದಾನ ಮತ್ತು ಮೇಲಿನ ಅಂತಸ್ತಿನಲ್ಲಿ ಟೈಲರಿಂಗ್ ಸೇರಿದಂತೆ ಇತರೆ ಕೆಲಸಕ್ಕೆ ಉಪಯುಕ್ತವಾಗಲು ಅನುದಾನ ಬಿಡುಗಡೆ ಮಾಡುವುದಾಗಿ ಅವರು ಹೇಳಿದರು.

ಬೆಂಕಿನಗರ ಮತ್ತು ಕಾಳಿದಾಸ ನಗರ ಜಿಮ್ ಸಹ 18 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲು ಮತ್ತು ನಗರದ ಗಾಂಧಿ ಮೈದಾನದಲ್ಲಿರುವ ಜಿಮ್ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ ಎಂದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕಾರ್ ಮಾತನಾಡಿ, ಶಾಸಕರು ಸೇರಿದಂತೆ ನಗರಸಭೆ ಪೌರಾಯುಕ್ತರಾದ ಎಸ್ .ಲಕ್ಷ್ಮಿ ಸಹಕಾರ ನೀಡಿದ್ದರಿಂದ ಜಿಮ್ ಬೇಗನೆ ಆರಂಭವಾಗಿದೆ. ಈ ಬಡಾವಣೆಯಲ್ಲಿ ಅನೇಕ ದಿನಗಳಿಂದ ನೆನೆಗುದಿಯಲ್ಲಿರುವ ಚರಂಡಿ, ರಸ್ತೆ, ವಿದ್ಯುತ್ ಪೂರೈಕೆ ಸೇರಿದಂತೆ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಈಗಾಗಲೇ ಹೆಜ್ಜೆಗಳನ್ನು ಹಾಕಲಾಗಿದೆ ಎಂದರು.

ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ನಗರ ಸಭೆ ಮಾಜಿ ಸದಸ್ಯ ಮೊಹಮ್ಮದ್ ಫೈರೋಜ್ ಪೈಲ್ವಾನ್, ಆಸಿಫ್ ಅಲಿ, ಸಿ.ಎನ್. ಹುಲಗೇಶ್, ಲತೀಫ್ ಸಾಬ್ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಮೌಲಾನಾ ಹಿದಾಯತ್ತುಲ್ಲಾ ಸಾಬ್, ನಗರಸಭೆ ಉಪಾಧ್ಯಕ್ಷ ಎಂ. ಎಸ್. ಬಾಬುಲಾಲ್, ನಗರಸಭೆ ಸದಸ್ಯ ಅಜೀಂ, ಮಾಜಿ ಸದಸ್ಯ ಏಜಾಜ್ ಆಹ್ಮದ್, ಮುಖಂಡರಾದ ದಾದಾಪೀರ್ ಭಾನುವಳ್ಳಿ, ಮನ್ಸೂರ್ ಮದ್ದಿ, ಪೈಲ್ವಾನ್ ರಹಮತ್ತುಲ್ಲಾ ಸಾಬ್, ಚಮನ್ ಷರೀಫ್, ಶಫಿ ಸಾಬ್, ತಲಿಗಿ ಶಬ್ಬೀರ್ ಸಾಬ್, ಅಬ್ಬು ಸಲೀಮ್, ಮುಲ್ಲಾ ಸಾಬ್, ಜಫ್ರುಲ್ಲಾ, ಶಿಕ್ಷಕ ರಿಯಾಜ್ ಅಹ್ಮದ್, ನಜೀರ್ ಹುಸೇನ್, ಬಿ.ಕೆ. ಮುಸ್ತು, ಉಮ್ಮರ ಬಾಷಾ, ಆಫ್ರೋಜ್ ಖಾನ್, ಅಂಗಡಿ ಕೃಷ್ಣಪ್ಪ, ಮೈನುದ್ದೀನ್ ಸಾಬ್, ರಫೀಕ್ ಸಾಬ್, ಆಶ್ವಕ್ ಸಾಬ್, ಸಿಕಂದರ್ ಸಾಬ್, ಶಬ್ಬಿರ್ ಸಾಬ್, ಬಬ್ಲೂ ಪೈಲ್ವಾನ್, ಇಲಿಯಾಸ್ ಆಹ್ಮದ್ ಮತ್ತಿತರರು ಉಪಸ್ಥಿತರಿದ್ದರು.



## ಪಾಲಿಕೆಯಲ್ಲಿ ಹುತಾತ್ಮರ ದಿನಾಚರಣೆ


ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದವರ ಸ್ಮರಣಾರ್ಥವಾಗಿ ಭಾನುವಾರ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಸಿಬ್ಬಂದಿಗಳು ಮೌನಾಚರಣೆ ಸಲ್ಲಿಸಿದರು.

## ಬ್ರಿಟನ್‌ನಲ್ಲಿ 5 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ

ಲಂಡನ್, ಜ. 30 – ಬ್ರಿಟನ್‌ನಲ್ಲಿ ಕೊರೊನಾ ಲಸಿಕೆ ಪಡೆಯುವ ವಯೋಮಾನವನ್ನು ಐದರಿಂದ 11 ವರ್ಷಗಳ ಮಕ್ಕಳಿಗೆ ವಿಸ್ತರಿಸಲಾಗಿದೆ.

ಸಕ್ಕರೆ ಕಾಯಿಲೆ, ಕಲಿಕೆಯ ಸಮಸ್ಯೆ ಹಾಗೂ ಇತರೆ ಗಂಭೀರ ಸಮಸ್ಯೆಗಳಿಂದ ಬಳಲುತ್ತಿರುವವರೂ ಸಹ ಲಸಿಕೆ ಪಡೆಯಬಹುದು ಎಂದು ಬ್ರಿಟನ್‌ನ ನ್ಯಾಷನಲ್ ಹೆಲ್ತ್ ಸರ್ವೀಸ್ (ಎನ್.ಹೆಚ್.ಎಸ್.) ತಿಳಿಸಿದೆ. ಬ್ರಿಟನ್‌ನ ಐದು ಲಕ್ಷ ಮಕ್ಕಳು ಲಸಿಕೆ ಪಡೆಯಲಿದ್ದಾರೆ.

## ರಾಜನಹಳ್ಳಿ ಮಠದಲ್ಲಿ ಇಂದು ವಾಲ್ಮೀಕಿ ಜಾತ್ರಾ ಸಮಿತಿ ಸಭೆ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಠದ ಧರ್ಮದರ್ಶಿಗಳ, ಸಮಾಜದ ಸಚಿವರ, ಶಾಸಕರ, ಸಂಸದರ ಹಾಗೂ ಜಿಲ್ಲಾಧ್ಯಕ್ಷ ಮತ್ತು ವಿಎಸ್‌ಎಸ್ ಪದಾಧಿಕಾರಿಗಳ ಸಭೆಯನ್ನು ಕರೆಯಲಾಗಿದೆ ಎಂದು 4ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರೂ ಆದ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ತಿಳಿಸಿದ್ದಾರೆ.

## ಸ್ವಾಮೀಜಿ ಪೀಠಾರೋಹಣ ಇಂದು

(1ನೇ ಪುಟದಿಂದ) ದಾವಣಗೆರೆ ಜಿಲ್ಲಾ ಆರ್ಯ-ಈಡಿಗರ ಸಂಘದ ಅಧ್ಯಕ್ಷ ಹೆಚ್. ಶಂಕರ್, ಪ್ರಧಾನ ಕಾರ್ಯದರ್ಶಿ ಎ.ನಾಗರಾಜ್ ವಿವರಿಸಿದ್ದಾರೆ.

ಕರ್ನಾಟಕ ಪ್ರದೇಶ ಆರ್ಯ-ಈಡಿಗರ ಸಂಘ ಮತ್ತು ಆರ್ಯ-ಈಡಿಗರ ಮಹಾಸಂಸ್ಥಾನ ಹಾಗೂ ಶ್ರೀ ರೇಣುಕ ಯಲ್ಲಮ್ಮದೇವಿ ದೇವಸ್ಥಾನ ಟ್ರಸ್ಟ್ ಇವರುಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಡಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ದಾವಣಗೆರೆ ಜಿಲ್ಲೆಯ ಆರ್ಯ-ಈಡಿಗ ಸಮಾಜ ಬಾಂಧವರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಕೋರಿದ್ದಾರೆ.


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

ಚಾಮರಾಜಪೇಟೆ, ದಾವಣಗೆರೆ - 577 001. 96861 95327



ಏಳನೇ ವರ್ಷದ ಪುಣ್ಯ ಸ್ಮರಣೆ



ಹಳ್ಳಿಕೇರಿ ಬಸವರಾಜಪ್ಪ

ಜನನ : 12-05-1952 ನಿಧನ : 31-01-2015

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷವಾಯಿತು.

ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

* ಹಳ್ಳಿಕೇರಿ ಸೇಲ್ಸ್ ಕಾರ್ಪೋರೇಷನ್, ಪಿ. ಬಿ. ರಸ್ತೆ, ದಾವಣಗೆರೆ
* ಹಳ್ಳಿಕೇರಿ ಇಂಡಸ್ಟ್ರೀಸ್, ಕರೂರು ಕೈಗಾರಿಕಾ ಪ್ರದೇಶ, ದಾವಣಗೆರೆ
* ಮೆ॥ ಹಳ್ಳಿಕೇರಿ ಇಂಡಸ್ಟ್ರೀಸ್, ಪೀಣ್ಯ ಕೈಗಾರಿಕಾ ಪ್ರದೇಶ, 2ನೇ ಹಂತ, ಬೆಂಗಳೂರು
* HP ಹಳ್ಳಿಕೇರಿ ಫ್ಯೂಯಲ್ ಸ್ಟೇಷನ್, ಹರಿಹರ ದಾವಣಗೆರೆ ರಸ್ತೆ, ದೊಡ್ಡಬಾತಿ

ಶ್ರೀಮತಿ ನೀಲಾಂಬಿಕ ಹಳ್ಳಿಕೇರಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಹಳ್ಳಿಕೇರಿ ವಂಶಸ್ಥರು ಮತ್ತು ಬಂಧು ಮಿತ್ರರು


# ಹೊಲಿಗೆ ತರಬೇತಿ, ಬ್ಯೂಟಿಷಿಯನ್, ಮೆಹಂದಿ ತರಬೇತಿ ಶಿಬಿರ ಆರಂಭ



ದಾವಣಗೆರೆ, ಜ. 30- ನೊಂದವರ ಬಾಳಲ್ಲಿ ಭರವಸೆಯ ಬೆಳಕು ಮೂಡಿಸುವ ನಿಟ್ಟಿನಲ್ಲಿ ನಗರದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಂಕಲ್ಪ ಸೇವಾ ಫೌಂಡೇಷನ್ ವತಿಯಿಂದ ಮಹಿಳೆಯರಿಗಾಗಿ ಹೊಲಿಗೆ ತರಬೇತಿ, ಬ್ಯೂಟೀಷಿಯನ್ ಮತ್ತು ಮೆಹಂದಿ ತರಬೇತಿ ನೀಡುವ ಶಿಬಿರ ಇಂದು ಆರಂಭವಾಯಿತು.

ಈ ಸಂಬಂಧ ಪಿ.ಜೆ. ಬಡಾವಣೆ 3ನೇ ಮುಖ್ಯರಸ್ತೆಯಲ್ಲಿರುವ ಮೇಕ್ ಓವರ್ ಬ್ಯೂಟಿ ಸ್ಟುಡಿಯೋ ಆವರಣದಲ್ಲಿ ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಗಿಡಕ್ಕೆ ನೀರೆರೆಯುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು.

ಆಶೀರ್ವಚನ ನೀಡಿದ ಶ್ರೀಗಳು, ಇಂದು ಒಂದು ಸುಸ್ಥಿತವಾಗಿರಬೇಕಾದರೆ ಗೃಹಿಣಿಯ ಜವಾಬ್ದಾರಿ ಮತ್ತು ಶ್ರಮ ಕಾರಣವಾಗಿದ್ದು, ಆಕೆಯ ಕುಟುಂಬದ ಬದುಕನ್ನು ಕಟ್ಟಿಕೊಡುವಲ್ಲಿ ಇಂತಹ ತರಬೇತಿ ಶಿಬಿರಗಳು ವೇದಿಕೆಯಾಗುವುದರ ಮೂಲಕ ಮಾದರಿಯಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಂದೀಪ್ ನರ್ಸಿಂಗ್ ಹೋಂ ಹಿರಿಯ ವೈದ್ಯರೂ, ದಾನಿಗಳೂ ಆಗಿರುವ ಡಾ.ಹೆಚ್. ಎನ್. ಮಲ್ಲಿಕಾರ್ಜುನಪ್ಪ ಅವರು ಶಿಬಿರಾರ್ಥಿಗಳಾದ ಮಹಿಳೆಯರನ್ನುದ್ದೇಶಿಸಿ ಮಾತನಾಡಿ, ನಿಮ್ಮ ಬಾಳಿನ ಮೇಲೆ ಬೆಳಕು ಚೆಲ್ಲುವಂತಹ ತರಬೇತಿ ನಿಮ್ಮದಾಗಿರಲಿ ಎಂದು ಆಶಯ ವ್ಯಕ್ತಪಡಿಸಿದರು.

ಮತ್ತೋರ್ವ ಅತಿಥಿಯಾಗಿದ್ದ 'ಜನತಾವಾಣಿ' ಉಪ ಸಂಪಾದಕ ಇ.ಎಂ. ಮಂಜುನಾಥ ಅವರು ಕೂಡಾ ಮಾತನಾಡಿ, ಈ ತರಬೇತಿಯು ನಿಮ್ಮ ಬದುಕಿಗೆ ಚೈತನ್ಯ ತರುವಂತಹ ಶಿಬಿರವಾಗಿರಲಿ ಎಂದು ಆಶಿಸಿದರು.

ಮಹಾನಗರ ಪಾಲಿಕೆ ಸದಸ್ಯ ಎಂ. ಪ್ರಸನ್ನಕುಮಾರ್, ಅಭಿ ಕಾಟನ್ ಮಾಲೀಕ ಎನ್. ಬಕ್ಕೇಶ್, ಹಿರಿಯ ಯೋಗಪಟುಗಳಾದ ಕಣಕುಪ್ಪಿ ಕರಿಬಸಪ್ಪ, ಉತ್ತಂಗಿ ಪ್ರಕಾಶ್ ಅವರುಗಳು ಆಶಯ ನುಡಿಗಳನ್ನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಜಿ. ಮಹಾಂತೇಶ್, ತಮ್ಮ ಸಂಸ್ಥೆ ಸಂಕಲ್ಪ ಸೇವಾ ಫೌಂಡೇಷನ್ ಧ್ಯೇಯಗಳನ್ನು ವಿವರಿಸಿ, ನೊಂದವರ ಕಣ್ಣೊರೆಸುವ ಪ್ರಾಮಾಣಿಕ ಪ್ರಯತ್ನ ಮಾಡುವ ಗುರಿಯನ್ನಿಟ್ಟುಕೊಳ್ಳಲಾಗಿದೆ ಎಂದು ತಿಳಿಸಿದರು.

ವಿ - ಒನ್ ಚಾನಲ್‌ನ ಚಿದಾನಂದ್, ಕಿರಣ್ ಕುಮಾರ್, ಗಿರೀಶ್, ಕೆ.ಜೆ. ನಾಗರಾಜ್, ಕೆ.ಜೆ. ಬದರೀಪ್ರಸಾದ್, ಬಾದಾಮಿ ಜಯಣ್ಣ, ರಾಮಚಂದ್ರಶೆಟ್ಟಿ, ರಾಜು, ಬಸವರಾಜು, ಮಾಲಾ, ಯಾಸ್ಮೀನ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೇಕ್ ಓವರ್ ಬ್ಯೂಟಿ ಸ್ಟುಡಿಯೋ ಮಾಲೀಕರು, ಹಿರಿಯ ಬ್ಯೂಟೀಷಿಯನ್ ಆದ ಶ್ರೀಮತಿ ಲಕ್ಷ್ಮಿ ಮತ್ತು ಬಿಐಇಟಿಯ ಮೆಕ್ಯಾನಿಕಲ್ ವಿಭಾಗದ ಯು.ಎಂ. ಸುರೇಶ್ ದಂಪತಿ ಸ್ವಾಗತಿಸಿದರು.

ಸಂಕಲ್ಪ ಸೇವಾ ಫೌಂಡೇಷನ್ ಕಾರ್ಯದರ್ಶಿ ಅನಿಲ್ ಕುಮಾರ್ ಬಿ. ರಾಯ್ಕರ್ ಕಾರ್ಯಕ್ರಮ ನಿರೂಪಿಸಿದರು.

> “ನೊಂದವರ ಬಾಳಲ್ಲಿ ಭರವಸೆಯ ಬೆಳಕು ಮೂಡಿಸುತ್ತಿರುವ ಸಂಕಲ್ಪ ಸೇವಾ ಫೌಂಡೇಶನ್ ಸೇವೆ ಶ್ಲಾಘನೀಯ.
>
> - ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte